# ತುಮಕೂರು ಪರಿಸರದ ಶೂನ್ಯ ಸಂಪಾದನೆಗಳು: ಒಂದು ಅವಲೋಕನ




**ಸಿ. ನಾಗಭೂಷಣ**
ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು.

**Article Link: https://aksharasurya.com/2024/01/c-nagabhushan/**

ಹನ್ನೆರಡನೇ ಶತಮಾನದಲ್ಲಿ ಅನುಭವ ಮಂಟಪದಲ್ಲಿ ನಡೆದ ಧಾರ್ಮಿಕ ಚಿಂತನೆಯಲ್ಲಿ ನಿರ್ಮಾಣವಾದ ವಚನಗಳ ವಾಸ್ತವಿಕತೆಯನ್ನು ಹದಿನಾರನೆಯ ಶತಮಾನದಲ್ಲಿ ಪೂರಕ ಸಾಮಗ್ರಿಗಳಿಂದ ಕಟ್ಟಿಕೊಡುವ ಪ್ರಯತ್ನ ನಡೆಯಿತು. ಉಪಲಬ್ಧ ವಚನಗಳನ್ನು ಆಯಾ ಸಾಂದರ್ಭಿಕ ಹಿನ್ನಲೆಯಲ್ಲಿ ಆಡಿರಬೇಕೆಂದು ಆ ವಚನಗಳನ್ನು ವ್ಯವಸ್ಥಿತವಾಗಿ ಸಂಕಲಿಸಿದ ಪ್ರಯತ್ನವೇ ಶೂನ್ಯ ಸಂಪಾದನೆಯ ಉಗಮಕ್ಕೆ ಕಾರಣ. ಶೂನ್ಯ ಸಂಪಾದನೆಯ ಮುಖ್ಯ ಉದ್ದೇಶ್ಯವು ಮೂಲಸಾಮಗ್ರಿಗಳಾದ ಬಿಡಿವಚನಗಳಿಂದ ವಾಸ್ತವವಾಗಿ ನಡೆದಿರಬಹುದಾದ ಘಟನೆಗಳನ್ನು ನಾಟಕೀಯವಾಗಿ ಚಿತ್ರಿಸುವುದಾಗಿದೆ. ಮುಕ್ತಕಗಳಂತಹ ವಚನಗಳನ್ನು ಆರಿಸಿಕೊಂಡು ಅವುಗಳನ್ನು ಒಂದು ಸಂದರ್ಭದಲ್ಲಿಟ್ಟು ಉತ್ತರ ಪ್ರತ್ಯುತ್ತರವಾಗಿ ಜೋಡಿಸಿ ಮಧ್ಯೆ ಮಧ್ಯೆ ಸಂಕಲನಕಾರ ವಿಷಯ ಸ್ಪಷ್ಟತೆಗಾಗಿ ತನ್ನ ಮಾತುಗಳನ್ನು ಸೇರಿಸಿ ನಾಟಕೀಯ ಸನ್ನಿವೇಶಗಳನ್ನು ಚಿತ್ರಿಸಿರುವುದು ಶೂನ್ಯಸಂಪಾದನೆಗೆ ಒಂದು ಸ್ವತಂತ್ರ ಗ್ರಂಥದ ಸ್ಥಾನವನ್ನು ತಂದಿವೆ. ವಚನಕಾರರನ್ನು ಅವರು ಎದುರಿಸಿದ ಸನ್ನಿವೇಶ ಮತ್ತು ಅಲ್ಲಿ ವ್ಯಕ್ತವಾಗುವ ಅವರ ಗುಣ ಸ್ವಭಾವಗಳನ್ನು ಅವರು ಪಡೆದ ಶೂನ್ಯದ ಲಾಭವನ್ನು ಅವರವರ ಮಾತುಗಳ ಮೂಲಕವಾಗಿಯೇ ಹೊಮ್ಮಿಸಿರುವ ಒಂದು ಅಪೂರ್ವಗ್ರಂಥ. ವಚನಗಳನ್ನು ಸಂಭಾಷಣೆಯ ರೀತಿಯಲ್ಲಿ ಜೋಡಿಸಿರುವ ಶೂನ್ಯ ಸಂಪಾದನೆಗಳು ಒಂದು ರೀತಿಯಲ್ಲಿ ಮರು ಓದಿನಿಂದ ಸೃಷ್ಟಿಯಾಗಿವೆ. ಶೂನ್ಯಸಂಪಾದನೆಗಳ ಸೃಷ್ಟಿಗೆ ಶರಣರು, ಅವರ ವಚನಗಳೇ ಆಕರವಾಗಿದ್ದು, ಶೂನ್ಯಸಂಪಾದನೆಗಳು ಸಿದ್ಧವಚನಗಳನ್ನು ಬಳಸಿಕೊಂಡು ಸಂವಾದರೂಪದಲ್ಲಿ ಹೆಣೆದ ಹೊಸರೀತಿಯ ಪಠ್ಯಗಳು ಎಂದು ವಿದ್ವಾಂಸ ರಿಂದ ಕರೆಯಿಸಿಕೊಂಡಿವೆ. ಮಾನವನ ಬದುಕಿಗೆ ಮೂಲವಾಗಿ ಬೇಕಾಗಿರುವ ಆಧ್ಯಾತ್ಮದ ತಿರುಳನ್ನು ತಿಳಿಸಿಕೊಟ್ಟಿವೆ. ಶೂನ್ಯಸಂಪಾದನೆ ಆಧುನಿಕ ಮೌಲ್ಯಗಳ

ಅರ್ಥದಲ್ಲಿ ಸಂವಾದವನ್ನು ಒಳಗೊಂಡಿರುವ ಪಠ್ಯವಲ್ಲ. 500 ವರ್ಷಗಳ ಹಿಂದೆ ಸಂವಾದರೂಪದ ರಚನೆಯನ್ನು ಕಲ್ಪಿಸಿಕೊಂಡ ಇವು ಅಪೂರ್ವ ಸಾಂಸ್ಕೃತಿಕ ಪಠ್ಯವೆಂದು ಆಧುನಿಕ ವಿದ್ವಾಂಸರಿಂದ ಗುರುತಿಸಲ್ಪಟ್ಟಿವೆ. ವಚನಕಾರರ ಜೀವನ ಹಾಗೂ ವಚನಗಳ ಮೂಲಕ ಸಾಂಸ್ಕೃತಿಕ ವಿದ್ಯಮಾನವಾಗಿ ಪರಿಣಮಿಸಿರುವ ಶೂನ್ಯ ಸಂಪಾದನೆಗಳು ಇಂದಿಗೂ ತನ್ನ ಮಹತ್ತರತೆಯನ್ನು ಕಾಯ್ದುಕೊಂಡಿವೆ. ಮುಕ್ತರ ಮಾರ್ಗ ವಚನಗಳನ್ನು ಉತ್ತರ–ಪ್ರತ್ಯುತ್ತರ ಸಂಬಂಧವಾಗಿ ಸೇರಿಸಿ, ಮರ್ತ್ಯಲೋಕದ ಮಹಾಗಣಂಗಳಿಗೆ ಮಹಾಪ್ರಸಂಗಮಂ ಮಾಡಿಕೊಡುವಂತಹ ಈ ಕೆಲಸವು ನಿಜವಾಗಿಯೂ ಒಂದು ಸೃಜಲಶೀಲ ಸಾಹಿತ್ಯದಷ್ಟೇ ಸವಾಲಿನದಾಗಿತ್ತು. ಇದಕ್ಕೆ ಇದ್ದ ಅನುಕೂಲವೆಂದರೆ ವಚನಗಳ ಮುಕ್ತಕ ಸ್ವರೂಪ. ಒಂದು ಅರ್ಥದಲ್ಲಿ ಬಂಧನಕ್ಕೆ ಸಿಗದೆ ಬಹುಮುಖಿಯಾಗಿಯೂ ಸ್ವತಂತ್ರವಾಗಿಯೂ ಉಳಿಯುವ ವಚನಗಳ ಸ್ವಾಯತ್ತ ಸ್ವರೂಪದ ಅನುಕೂಲವೆ ಶೂನ್ಯಸಂಪಾದನೆಯ ಸೃಷ್ಟಿಗೆ ಅನುಕೂಲವಾಗಿದೆ. ಗತಕಾಲದ ಸಾಧನೆಯನ್ನು ಅದರ ಗ್ರಹಿಕೆಯೊಂದಿಗೆಯೂ ವರ್ತಮಾನದ ಸಾಧನೆಯನ್ನು ಅದರ ಮಿತಿಗಳೊಂದಿಗೂ ಸಂವಾದಮಾಡುವವರಿಗೆ ಶೂನ್ಯಸಂಪಾದನೆ ಖಂಡಿತವಾಗಿಯೂ ಪ್ರೇರೇಪಿಸುತ್ತವೆ.

ತುಮಕೂರು ಜಿಲ್ಲೆಯು ಶರಣ ಸಾಹಿತ್ಯ–ಸಂಸ್ಕೃತಿಯ ಪುನರುಜ್ಜೀವನ ಕಾಲದಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಿದೆ. ವಚನ ರಚನೆಯ ಪರಂಪರೆಯಲ್ಲಿಯೂ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಕಲ್ಯಾಣ ಕ್ರಾಂತಿಯ ವಿಪ್ಲವದ ನಂತರ ತುಮಕೂರು ಪರಿಸರದ ಎಡೆಯೂರು, ಗುಬ್ಬಿ, ಗೂಳೂರು, ಅದರಂಗಿ ಸುತ್ತಮುತ್ತಲ ಪರಿಸರವು ಸಂಘಟನೆಯ ಪ್ರಧಾನ ಕೇಂದ್ರವಾಗಿದ್ದು ಶರಣ ಧರ್ಮದ ಅಧ್ಯಯನ ಹಾಗೂ ಸಾಹಿತ್ಯ ಚಟುವಟಿಕೆಗಳಿಗೆ ಸೂಕ್ತವಾದ ಪರಿಸರವನ್ನು ಕಲ್ಪಿಸಿಕೊಟ್ಟಿತು. ಪರಿಣಾಮ ವೀರಶೈವ ಸಾಹಿತ್ಯ ಹುಲುಸಾಗಿ ಸೃಷ್ಟಿಯಾಯಿತು. ಅಭಿನವ ಅಲ್ಲಮರೆಂದು ಖ್ಯಾತರಾದ ತೋಂಟದ ಸಿದ್ಧಲಿಂಗಯತಿಗಳು ತಮ್ಮ ಶಿಷ್ಯ–ಪ್ರಶಿಷ್ಯ ಪರಂಪರೆಯ ಮೂಲಕ ಗ್ರಂಥಸಂಪಾದನೆಯ ವಿಧಿವಿಧಾನಗಳನ್ನು ಅನ್ವಯಿಸಿ ವಚನಗಳನ್ನು ಸಂಕಲಿಸುವ ವ್ಯಾಖ್ಯಾನಿಸುವಂತಹ ಸಾಹಿತ್ಯಕ ಚಟುವಟಿಕೆಗಳನ್ನು ಕೈಗೊಂಡಿರುವುದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ವಿಶಿಷ್ಟವಾದುದಾಗಿದೆ. ಆಕರ ವಸ್ತು ವಿನ್ಯಾಸ, ನಿರೂಪಣ ಕ್ರಮ, ನಾಟಕೀಯತೆಗಳಲ್ಲಿ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಸ್ಥಾನ ಗಳಿಸಿರುವ ಶೂನ್ಯ ಸಂಪಾದನೆಗಳು ವಚನ ಸಂಕಲನ ಗ್ರಂಥಗಳಲ್ಲಿಯೇ ಮಹತ್ತರವಾಗಿದ್ದು ತುಮಕೂರು ಜಿಲ್ಲೆಯ ತೋಂಟದಸಿದ್ಧಲಿಂಗಯತಿಗಳ ಶಿಷ್ಯ–ಪ್ರಶಿಷ್ಯರ ಮೂಲಕ ಸಂಪಾದನೆಗೊಂಡವುಗಳಾಗಿವೆ. ಅಚ್ಚರಿಯ ಸಂಗತಿ ಎಂದರೆ

ಮೂರು ಶೂನ್ಯಸಂಪಾದನೆಗಳು ಜಿಲ್ಲೆಯ ಪರಿಸರದಲ್ಲಿಯೇ ರಚಿತವಾದವುಗಳಾಗಿವೆ ಎಂಬುದು. ಮೊದಲನೆ ಶೂನ್ಯ ಸಂಪಾದನಾಕಾರ ಶಿವಗಣ ಪ್ರಸಾದಿಮಹದೇವಯ್ಯನನ್ನು ಹೊರತು ಪಡಿಸಿ ಉಳಿದ ಶೂನ್ಯಸಂಪಾದನಾಕಾರರು ಜಿಲ್ಲೆಯ ಪರಿಸರಕ್ಕೆ ನೇರವಾಗಿ ಸಂಬಂಧಪಟ್ಟವರಾಗಿದ್ದಾರೆ. ಶೂನ್ಯಸಂಪಾದನೆಯ ಪರಿಷ್ಕರಣಗಳು ಗೂಳೂರು, ಗುಬ್ಬಿ, ಅದರಂಗಿ ಮತ್ತು ಗುಮ್ಮಳಾಪುರ ಇವುಗಳ ಸನಿಹದಲ್ಲಿ ಅಂದರೆ ತುಮಕೂರು ಜಿಲ್ಲೆಯ ಪರಿಸರದಲ್ಲಿ ಸೃಷ್ಟಿಯಾದವುಗಳಾಗಿರುವುದು. ಶೂನ್ಯಸಂಪಾದನೆಯಂತಹ ಮಹಾಪ್ರಸಂಗವೊಂದು ರೂಪುಗೊಂಡಿದ್ದು, ಅನಂತರ ಅದು ಅಂದಿನ ಧಾರ್ಮಿಕ ಅಗತ್ಯಗಳನ್ನು ಪೂರೈಸಲೆಂಬಂತೆ ಹೆಚ್ಚು ಮತೀಯವಾಗಿ ಪರಿಷ್ಕರಣಗೊಂಡಿದ್ದು. ಅದು ಮತ್ತೆ ಮಹಾದೇವಯ್ಯನ ದರ್ಶನದ ಜಾಡನ್ನೇ ಹಿಡಿದು ಕಲಾತ್ಮಕತೆಯನ್ನು ಒಳಗೊಳ್ಳುತ್ತಲೇ ತನ್ನ ಪರಿಧಿಯೊಳಕ್ಕೆ ಶರಣರ ಮಹಾದರ್ಶನದ ಎಳೆಗಳನ್ನು ಒಳಗೊಂಡಿದ್ದು ತುಮಕೂರು ಪರಿಸರದ ಪ್ರದೇಶದ ಸಾಂಸ್ಕೃತಿಕ ಮಹತ್ವವನ್ನು ತಿಳಿಯಲು ಸಾಧ್ಯವಾಗುತ್ತದೆ.

ಇಲ್ಲಿಯವರೆಗೆ ಪ್ರಕಟವಾಗಿರುವ ಶೂನ್ಯಸಂಪಾದನೆಗಳಲ್ಲಿ ಶಿವಗಣಪ್ರಸಾದಿ ಮಹಾದೇವಯ್ಯನವರ ಶೂನ್ಯಸಂಪಾದನೆಯೇ ಮೊಟ್ಟಮೊದಲನೆಯ ಶೂನ್ಯಸಂಪಾದನೆಯಾಗಿದೆ. ಇದರ ಕಾಲ ಸುಮಾರು 1430. ಹಲಗೆಯ ದೇವರ ಶೂನ್ಯಸಂಪಾದನೆ ಕ್ರಿ.ಶ. 1528ರಲ್ಲಿ ರಚಿತವಾಗಿರಬಹುದಾದ ಎರಡನೆ ಸಂಪಾದನೆ. ಕ್ರಿ.ಶ. 1580ರಲ್ಲಿ ರಚನೆಯಾದ ಗುಮ್ಮಳಾಪುರ ಸಿದ್ಧಲಿಂಗ ಯತಿಗಳ ರಚನೆ ಮೂರನೆಯ ಶೂನ್ಯ ಸಂಪಾದನೆ. ಕ್ರಿ.ಶ. 1616ರಲ್ಲಿ ರಚನೆಯಾದ ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆ ನಾಲ್ಕನೆಯ ಶೂನ್ಯ ಸಂಪಾದನೆಯಾಗಿದೆ. ಈ ಸಂಪಾದನೆಗಳ ಮೂಲ ಜನಕ ಶಿವಗಣಪ್ರಸಾದಿ ಮಹಾದೇವಯ್ಯ. ಹೀಗೆ ಶತಶತಮಾನದಲ್ಲಿ ಅಡಗಿಹೋದ ವಚನಗಳನ್ನು ಹುಡುಕಿ, ಅವುಗಳನ್ನು ಸಂಗ್ರಹ, ಸಂಕಲನ, ಸಂಪಾದನೆಗಳ ಮೂಲಕ ಕೂಡಿಟ್ಟಿರುವದು ಬಹು ಶ್ಲಾಘನೀಯ ಕಾರ್ಯವಾಗಿದೆ. ಸಂಪಾದನಾಕಾರರ ಆ ಪ್ರಯತ್ನದಿಂದಾಗಿ ನಮಗಿಂದು ಸಿಕ್ಕಿರುವ ವಚನಗಳು ಅಲ್ಪವೆನಿಸಿದರೂ ಸಹ, ಅವರ ಪ್ರಯತ್ನವಿಲ್ಲದಿದ್ದರೆ ಇಷ್ಟಾದರೂ ವಚನಗಳು ನಮಗೆ ದೊರಕಿರುವ ಸಾಧ್ಯತೆಯು ಕಡಿಮೆಯೇ ಇತ್ತೆಂದು ಹೇಳಬಹುದು. ಆ ಕಾರಣವಾಗಿ ತುಮಕೂರು ಜಿಲ್ಲೆಯ ಶೂನ್ಯ ಸಂಪಾದನಾಕಾರರನ್ನು ಒಳಗೊಂಡಂತೆ ಸಂಗ್ರಹ, ಸಂಕಲನ, ಸಂಪಾದನಾಕಾರರಿಗೆ ಕನ್ನಡ ಸಾಹಿತ್ಯವು ಕೃತಜ್ಞತೆಯನ್ನು ಸಲ್ಲಿಸಬೇಕು. ಶಿವಗಣ ಪ್ರಸಾದಿ ಮಹಾದೇವಯ್ಯನ ಕೃತಿಯ ನಂತರ ನಿರ್ಮಾಣವಾದ ಕೃತಿಗಳು ಏನಿದ್ದರೂ ಆ ಮೂಲವನ್ನೇ ಆಧರಿಸಿ ಅಲ್ಪ ಸ್ವಲ್ಪ ಬದಲಾವಣೆ ಹಾಗೂ ಕೆಲವು ಹೊಸ ಪ್ರಸಂಗಗಳು ಅಳವಡಿಸಲ್ಪಟ್ಟ

ಪರಿಷ್ಕರಣಗಳಾಗಿವೆ. ಮಹಾದೇವಯ್ಯನ ಮೂಲಕೃತಿ ನಂತರದ ಸಂಕಲನಕಾರರಿಂದ ಪರಿಷ್ಕರಣಗೊಳ್ಳಲು ಬಹುಮುಖ್ಯ ಕಾರಣ ಸಿದ್ಧರಾಮಯ್ಯ ದೀಕ್ಷಾ ಪ್ರಸಂಗ. ಇದರ ಜೊತೆಗೆ ಅಲ್ಲಮ ಕಾಮಲತೆಯರ ಪ್ರಸಂಗ, ಅಕ್ಕ ಕೌಶಿಕರ ಸಂಬಂಧ, ಕಿನ್ನರಯ್ಯನ ಪ್ರಸಂಗ, ಕಾಲ ಕಾಲಕ್ಕೆ ಸಂಕಲನಗೊಂಡ ನಂತರದ ಶೂನ್ಯ ಸಂಪಾದನೆಗಳಲ್ಲಿ ಕೆಲವು ಸನ್ನಿವೇಶಗಳು ಹೊಸದಾಗಿ ಸೇರ್ಪಡೆಯಾಗಿವೆ. ಶಿವಗಣ ಪ್ರಸಾದಿ ಮಹಾದೇವಯ್ಯನು ಮೊದಲು ರೂಪಿಸಿದ ಶೂನ್ಯಸಂಪಾದನೆಯ ತಳಹದಿ ಹಾಗೂ ಆ ಚೌಕಟ್ಟಿನಲ್ಲಿಯೇ ನಂತರದ ಮೂರು ಶೂನ್ಯ ಸಂಪಾದನೆಗಳ ಪರಿಷ್ಕರಣೆ ಹಾಗೂ ಕೆಲವು ನೂತನ ಪ್ರಸಂಗಗಳ ಸೇರ್ಪಡೆಯೊಂದಿಗೆ ರೂಪಿಸಲ್ಪಟ್ಟಿವೆ.

ಇತ್ತೀಚೆಗೆ ಮೊದಲನೆ ಶೂನ್ಯಸಂಪಾದನಕಾರ ಶಿವಗಣ ಪ್ರಸಾದಿ ಮಹಾದೇವಯ್ಯನು ಜಿಲ್ಲೆಯ ಪರಿಸರದವನೇ ಆಗಿರಬೇಕು ಎಂಬುದರ ಬಗೆಗೆ ಹೆಚ್ಚಿನ ಸಂಶೋಧಕರ ನಿಲುವು ವ್ಯಕ್ತವಾಗಿದೆ. ಏಕೆಂದರೆ ನಂತರದ ಕಾಲದಲ್ಲಿ ಈತನ ಶೂನ್ಯಸಂಪಾದನೆಯನ್ನು ಪರಿಷ್ಕರಿಸಿದ ಮೂವರು ಶೂನ್ಯಸಂಪಾದನಕಾರರು ಜಿಲ್ಲೆಯ ಪರಿಸರಕ್ಕೆ ನೇರವಾಗಿ ಸಂಬಂಧಪಟ್ಟವರು ಆಗಿರುವುದು. ಆದಾಗ್ಯೂ ಇದನ್ನು ಸಮರ್ಥಿಸಲು ಇನ್ನು ಹೆಚ್ಚಿನ ಆಧಾರಗಳು ಲಭ್ಯವಾಗಬೇಕಾಗಿದೆ. ಎರಡನೇ ಶೂನ್ಯಸಂಪಾದನಕಾರನಾದ ಹಲಗೆಯಾರ್ಯನು ತುಮಕೂರು ಜಿಲ್ಲೆಯ ಪರಿಸರದ ಅದರಂಗಿಯವನು ಎಂಬುದು ಇತ್ತೀಚಿನ ಸಂಶೋಧನೆಯಿಂದ ದೃಢಪಟ್ಟಿದೆ. ಬಿ. ನಂಜುಂಡಸ್ವಾಮಿಯವರು, ಎರಡನೇ ಶೂನ್ಯಸಂಪಾದನಾಕಾರನಾದ ಹಲಗೆಯಾರ್ಯನೂ ಶಿವಗಂಗೆ ಬೆಟ್ಟದ ಮೇಲಣ ಗವಿಮಠಕ್ಕೆ ಅಧ್ಯಕ್ಷನಾಗಿದ್ದನೆಂದೂ ಆತನಿಂದ ಅದರಂಗಿ ಗ್ರಾಮ ನಿರ್ಮಾಣವಾಯಿತೆಂದೂ ಇತ್ತೀಚಿನ ಸಂಶೋಧನೆಯ ಮೂಲಕ ಸಾಬೀತು ಪಡಿಸಿದ್ದಾರೆ. ವಿರಕ್ತಾಧೀಶ್ವರ ಹಲಗೆದೇವರು ವೀರಶೈವಾಮೃತ ಪುರಾಣ ರಚಿಸಲು ಮಲ್ಲಣಾರ್ಯರಿಗೆ ಪ್ರೇರಣೆಯಿತ್ತರು. ಗುಬ್ಬಿಯ ಮಲ್ಲಣಾರ್ಯರು ಇದನ್ನು ಪದ್ಯದಲ್ಲಿ ಕೃತಿ ವಿರಚನೆ ಮಾಡಿರುವರು. ಈ ಪುರಾಣ ಕಾವ್ಯದಲ್ಲಿ ಹಲಗೆದೇವರು ಕೆಂಚವೀರಣ್ಣೊಡೆಯರಿಗೆ ಹೇಳಿದಂತೆ ಹಲವಡೆ ಉಲ್ಲೇಖವಿದೆ. ಹಲಗೆದೇವರು ವೀರಶೈವ ಸಿದ್ಧಾಂತವನ್ನು ಅದರ ಹಿನ್ನಲೆ ಮುನ್ನಲೆಗಳನ್ನು ವಿವರಿಸಿದ್ದು ಅದನ್ನು ಕರಗತ ಮಾಡಿಕೊಂಡು ಸ್ವಾನುಭವದಿಂದ ಮಲ್ಲಣಾರ್ಯನು ಈ ಬೃಹತ್ ಕಾವ್ಯವನ್ನು ರಚಿಸಿದ್ದಾನೆ. ಈ ವಿವರಗಳು ಹಲಗೆಯಾರ್ಯರು ಜಿಲ್ಲೆಯ ಪರಿಸರಕ್ಕೆ ಸಂಬಂಧಪಟ್ಟವರು ಎಂಬುದಕ್ಕೆ ಪುರಾವೆ ದೊರೆತಂತಾಗಿದೆ. ಹಲಗೆಯಾರ್ಯನು ತನ್ನ ಶೂನ್ಯ ಸಂಪಾದನೆಯ ಪರಿಷ್ಕರಣದಲ್ಲಿ 37 ವಚನಕಾರರ 1599 ವಚನಗಳು ಮತ್ತು 35 ಸ್ವರವಚನಗಳನ್ನು ಬಳಸಿದ್ದಾನೆ. ಶಿವಗಣಪ್ರಸಾದಿ ಮಹಾದೇವಯ್ಯನು ತನ್ನ ಶೂನ್ಯಸಂಪಾದನೆಯಲ್ಲಿ ವಿನಯಪೂರ್ವಕವಾಗಿ ಹೇಳಿದ್ದ,

ತಾನು ಸೇರ್ಪಡೆ ಮಾಡಿರುವ ವಚನಾನುಕ್ರಮದಲ್ಲಿ ಏನಾದರೂ ದೋಷವಿದ್ದರೆ ತಿದ್ದಿಕೊಂಡು ವಚನಾನುಭವ ಪ್ರಸಂಗವನ್ನು ಮುಂದಿನವರು ಮಾಡಬಹುದೆನ್ನುವ ಸೂಚನೆಯನ್ನನುಸರಿಸಿ ಶೂನ್ಯಸಂಪಾದನೆಯ ಪರಿಷ್ಕರಣ ಮಾಡಿದ ಮೊದಲ ವ್ಯಕ್ತಿಯಾಗಿ ಹಲಗೆಯದೇವ ಕಂಡು ಬಂದಿದ್ದಾನೆ. ಈತನ ಶೂನ್ಯಸಂಪಾದನೆಯ ಪರಿಷ್ಕರಣದ ವೈಶಿಷ್ಟ್ಯಗಳು ಈ ಕೆಳಕಂಡಂತಿವೆ.

ಮೊದಲನೆಯದಾಗಿ ತನ್ನ ಪರಿಷ್ಕರಣಕ್ಕೆ ಧಾರ್ಮಿಕತೆಯನ್ನೆ ಕಾರಣವಾಗಿ ಮಾಡಿಕೊಂಡು ಸಿದ್ಧರಾಮಾದಿಗಳಿಗೆ (ಪ್ರಭುವಿಗೂ) ದೀಕ್ಷೆ ನೀಡಿಸಿದ್ದಾನೆ. ಎರಡನೆಯದಾಗಿ ನುಲಿಯ ಚಂದಯ್ಯನ ಪ್ರಸಂಗದ ಮೂಲಕ ಕಾಯಕದ ದರ್ಶನವನ್ನು ಒಳಗೊಂಡು ಮೊದಲ ಶೂನ್ಯಸಂಪಾದನೆಯ ದರ್ಶನದ ಕೊರತೆಯನ್ನು ನೀಗುವ ಹೊಸ ಪ್ರಸಂಗ ಸೃಷ್ಟಿಸಿದ್ದಾನೆ. ಮೂರನೆಯದಾಗಿ ಪ್ರಸಂಗಗಳ ಪರಿಷ್ಕರಣಕ್ಕೆ ಕಾರಣವಾಗಿ ಅಕ್ಕಮಹಾದೇವಿಯ ಪ್ರಸಂಗ ಹಾಗೂ ಮರುಳುಶಂಕರದೇವರ ಪ್ರಸಂಗಗಳನ್ನು ವಿಸ್ತೃತವಾಗಿ ಬೆಳೆಸಿದ್ದಾನೆ. ನಾಲ್ಕನೆಯದಾಗಿ ಮಹಾದೇವಯ್ಯನಲ್ಲಿ ಕಿನ್ನರಿಬೊಮ್ಮಯ್ಯನ ಬಗೆಗೆ ಆಶಯಮಾತ್ರವಾಗಿದ್ದ ಅಂಶವನ್ನು ಕಿನ್ನರಿಬೊಮ್ಮಯ್ಯಗಳ ಪ್ರಸಂಗವಾಗಿ ರೂಪಿಸಿದ್ದಾನೆ. ಐದನೆಯದಾಗಿ ಹೊಸ ವಚನಗಳ ಸೇರ್ಪಡೆಯ ಮೂಲಕ ಮುಕ್ತಾಯಕ್ಕಳ ಪ್ರಸಂಗ ಮತ್ತು ಸಿದ್ಧರಾಮನ ದೀಕ್ಷಾಪ್ರಸಂಗದ ಸ್ವಾರಸ್ಯವನ್ನು ವಿಸ್ತೃತಪಡಿಸಿದ್ದಾನೆ. ಹಲಗೆಯದೇವ ನಿಸ್ಸಂಶಯವಾಗಿ ಶರಣ ಸಾಹಿತ್ಯ–ಸಂಸ್ಕೃತಿಯ ಪುನರುಜ್ಜೀವನ ಯುಗದ ಮಹತ್ವದಶೂನ್ಯ ಸಂಪಾದನಾ ಪರಿಷ್ಕರಣಕಾರ. ಆತನು ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆಯನ್ನು ತನ್ನ ಶಿಷ್ಯರಿಗೆ ಬೋಧನೆಯ ಪಠ್ಯವಾಗಿ ಸ್ವೀಕರಿಸಿದ್ದರಿಂದ ಅವನಿಗೆ ಶಿವಗಣಪ್ರಸಾದಿ ಮಹಾದೇವಯ್ಯನ ಕೊರತೆಗಳು ಗಮನಕ್ಕೆ ಬಂದಿದ್ದು, ಪರಿಷ್ಕರಣದ ಮೂಲಕ ಕೊರತೆಗಳನ್ನು ತುಂಬುವ, ತನ್ನ ಕಾಲದ ಧಾರ್ಮಿಕ ಅಗತ್ಯಗಳಿಗೆ ಅನುಗುಣವಾಗಿ ಅದನ್ನು ಪರಿಷ್ಕರಿಸುವ ಉದ್ದೇಶವನ್ನು ತಾಳಿದ. ಜೊತೆಗೆ ಅವನ ಧಾರ್ಮಿಕ ಮನಸ್ಸು ಶೂನ್ಯಸಂಪಾದನೆಯ ಪರಿಷ್ಕರಣಕ್ಕೆ ನಾಂದಿ ಹಾಡಿದೆ. ನಂತರ ಪರಿಷ್ಕರಣಕಾರರು ಈತನನ್ನು ಸ್ಮರಿಸದಿದ್ದರೂ ಅವರ ಮೇಲೆ ಇವನ ಪ್ರಭಾವವಾಗಿರುವುದಂತೂ ದಿಟ.

ಶೂನ್ಯಸಂಪಾದನೆಯ ಮೂರು ಪರಿಷ್ಕರಣಗಳು ನಡೆಯುವ ಸಂದರ್ಭದಲ್ಲಿ ಮತ್ತು ಆ ಕಾಲದಲ್ಲಿ ಸಾಂಸ್ಕೃತಿಕ ಮಹತ್ವವನ್ನು ಮತ್ತು ಪ್ರಭಾವವನ್ನು ಪಡೆದಿದ್ದ ಎಡೆಯೂರು ಸಿದ್ಧಲಿಂಗೇಶ್ವರರು ಮತ್ತು ಬೋಳಬಸವೇಶ್ವರರು ಕನ್ನಡನಾಡಿನ ಸಾಂಸ್ಕೃತಿಕ ಹಾಗೂ ಧಾರ್ಮಿಕ ಜೀವನದ ಮೇಲೆ ವ್ಯಾಪಕವಾದ ಪ್ರಭಾವವನ್ನು ಬೀರಿದವರಾಗಿ ಕಂಡು ಬರುತ್ತಾರೆ. ಮೂರನೇ ಮತ್ತು ನಾಲ್ಕನೇ

ಶೂನ್ಯಸಂಪಾದನಕಾರರಾದ ಗುಮ್ಮಳಾಪುರದ ಸಿದ್ಧಲಿಂಗಯತಿ ಹಾಗೂ ಗೂಳೂರು ಸಿದ್ಧವೀರಣ್ಣೊಡೆಯರು ನೇರವಾಗಿ ತೋಂಟದ ಸಿದ್ಧಲಿಂಗಯತಿಗಳ ಶಿಷ್ಯ ಮತ್ತು ಪ್ರಶಿಷ್ಯರಾಗಿದ್ದು ತುಮಕೂರು ಜಿಲ್ಲೆಗೆ ಸಂಬಂಧಪಟ್ಟವರಾಗಿದ್ದಾರೆ. ಗುಮ್ಮಳಾಪುರದ ಸಿದ್ಧಲಿಂಗಯತಿಯು ತೋಂಟದ ಸಿದ್ಧಲಿಂಗನ ಶಿಷ್ಯಪರಂಪರೆಯಲ್ಲಿ ಬರುವ ಮಹತ್ವದ ವಿರಕ್ತ ಕವಿ, ವಚನಕಾರ ಮತ್ತು ಶೂನ್ಯ ಸಂಪಾದನಾಕಾರನಾಗಿದ್ದು ಶೂನ್ಯಪೀಠದ ಉತ್ತರಾಧಿಕಾರಿಗಳಲ್ಲಿ ಒಬ್ಬನಾಗಿದ್ದಾನೆ. ಈತನ ಶೂನ್ಯಸಂಪಾದನೆಯಲ್ಲಿ ತನ್ನ ಬಗೆಗೆ, ತೋಂಟದ ಸಿದ್ಧೇಶ್ವರನ ವರಪುತ್ರನಾಗಿ ಜಗಹಿತಾರ್ಥವಾಗಿ ಗುಮ್ಮಳಾಪುರದ ಸಿದ್ಧಲಿಂಗದೇವರೆಂಬ ನಾಮವಿಡಿದು ಅನಾದಿ ಪರಶಿವ ತಾನೆ ತೋಂಟದ ಸಿದ್ಧೇಶ್ವರದೇವರ ದಿವ್ಯಶ್ರೀ ಪಾದಕ್ಕೆ ಸಮರ್ಪಿಸಿದ ಶೂನ್ಯ ಸಂಪಾದನೆ ಎಂದು ಹೇಳಿಕೊಂಡಿದ್ದಾನೆ. ಜೊತೆಗೆ ಸಮಾಪ್ತಿ ಕಂದ ಪದ್ಯ 4 ರಲ್ಲಿ ತೋಂಟದ ಸಿದ್ಧೇಶ್ವರನ ಪಾದಮೂಲದ ಬಳಿ ಕುಳಿತ ಗುಮ್ಮಳಾಪುರಾಧೀಶನಾದ ತಾನು ಮೀಟೆನಿಸುವ ವಚನಾಮೃತದೂಟವ (ಶೂನ್ಯ ಸಂಪಾದನೆಯನ್ನು) ಶರಣಜನರ ಕರ್ಣಕ್ಕಿತ್ತುದಾಗಿ ಹೇಳಿಕೊಂಡಿದ್ದಾನೆ. ಅಲ್ಲದೆ ಕ್ರಿ.ಶ 1580 ರ ಎಡೆಯೂರು ಶಿಲಾಶಾಸನದಲ್ಲಿ ತೋಂಟದ ಸಿದ್ಧಲಿಂಗ ಯತಿಗಳ ಜೊತೆಗೆ ಇದ್ದ ಇತರ ವಿರತರುಗಳ ಜೊತೆ ಗುಮ್ಮಳಾಪುರದ ಸಿದ್ಧಲಿಂಗರೂ ಇದ್ದರು ಎಂಬ ವಿವರ ಹಾಗೂ ಸಿದ್ಧನಂಜೇಶನ ರಾಘವಾಂಕ ಚ ರಿತದಲ್ಲಿಯ, ತುಮಕೂರಿನಲ್ಲಿ ನಡೆದ ತೋಂಟದ ಸಿದ್ಧಲಿಂಗರ ಮೆರವಣಿಗೆಯಲ್ಲಿ ಗುಮ್ಮಳಾಪುರದ ಸಿದ್ಧಲಿಂಗನೂ ಭಾಗವಹಿಸಿದ್ದನೆಂಬ ಹೇಳಿಕೆಯು ತೋಂಟದ ಸಿದ್ಧಲಿಂಗ ಯತಿಗಳ ಪರಂಪರೆಯವನು ಎಂಬುದನ್ನು ಸ್ಥಿರೀಕರಿಸುತ್ತದೆ. ತುಮಕೂರು ಜಿಲ್ಲೆಯ ಹಸ್ತಪ್ರತಿ ಪುಷ್ಪಿಕೆಗಳಲ್ಲಿಯ ಉಲ್ಲೇಖಗಳು ಶೂನ್ಯ ಸಂಪಾದನಾಕಾರ ಗುಮ್ಮಳಾಪುರ ಸಿದ್ಧಲಿಂಗಯತಿಗೂ ತುಮಕೂರು ಜಿಲ್ಲೆಯ ಪರಿಸರಕ್ಕೂ ಇದ್ದ ನಿಕಟ ಸಂಪರ್ಕದ ಬಗೆಗೆ ಹಾಗೂ ತೋಂಟದಸಿದ್ಧಲಿಂಗಯತಿಗಳ ಶಿಷ್ಯ ಪರಂಪರೆಯವನು ಎಂಬುವುದಕ್ಕೆ ಪುರಾವೆಯನ್ನು ಒದಗಿಸುತ್ತದೆ. ಗುಮ್ಮಳಾಪುರದ ಸಿದ್ಧಲಿಂಗದೇವನಿಗೆ ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆಯನ್ನು ಪರಿಷ್ಕರಿಸಲು ಪ್ರಮುಖ ಕಾರಣವಾಗಿ ಬಂದುದು ಅಲ್ಲಿ ಸಿದ್ಧರಾಮಯ್ಯದೇವರಿಗೆ ದೀಕ್ಷೆಯಿಲ್ಲದುದು. ಇದನ್ನು ತಾನು ತನ್ನ ಶೂನ್ಯ ಸಂಪಾದನೆಯಲ್ಲಿ ಪ್ರಧಾನವಾಗಿ ತಂದಿರುವುದಾಗಿ ಹೇಳಿಕೊಂಡಿದ್ದಾನೆ

ಈ ಸಿದ್ಧರಾಮನ ಲಿಂಗದೀಕ್ಷಾ ಪ್ರಸಂಗದ ಹಿಂದಿರುವ ಸತ್ಯಾಸತ್ಯತೆಗಳೇನೆಂಬುದನ್ನು ಕುರಿತು ಚಿಂತಿಸಿದಾಗ ಒಂದು ಮಾತು ಸ್ಪಷ್ಟವಾಗುತ್ತದೆ. ಸಿದ್ಧರಾಮನ ಲಿಂಗದೀಕ್ಷೆಯ ಈ ಪ್ರಸಂಗವನ್ನು ಗುಮ್ಮಳಾಪುರದ ಸಿದ್ಧಲಿಂಗಯತಿಯು ಔಚಿತ್ಯಪೂರ್ಣವಾಗಿ ಸಂಗ್ರಹಿಸಿದ್ದಾನೆ. ಮುಂದಿನ ಸಂಪಾದನಕಾರರು ತೋಂಟದ

ಶಿವಯೋಗಿಗಳ ಪರಂಪರೆಯಲ್ಲಿ ಬೆಳೆದವರಾದ್ದರಿಂದ ಅವರು ಸಹಜವಾಗಿಯೇ ಇಷ್ಟಲಿಂಗ ಪರಂಪರೆಗೆ ಬದ್ಧರಾದ್ದರಿಂದ ಸಿದ್ಧರಾಮನ ಲಿಂಗದೀಕ್ಷಾ ಪ್ರಕರಣವನ್ನು ಸೇರಿಸಲೆಂದೇ ಶೂನ್ಯಸಂಪಾದನೆಗಳನ್ನು ಪರಿಷ್ಕರಿಸಬೇಕು ಎಂಬ ಮಾತಿನಲ್ಲಿ ಸತ್ಯಾಂಶವಿದೆ. ಇದುವೇ ಒಂದು ರೀತಿಯಲ್ಲಿ "ಶೂನ್ಯ ಸಂಪಾದನೆಯ ಪರಿಷ್ಕರಣಗಳು ಮೇಲಿಂದ ಮೇಲೆ ಆದದ್ದಕ್ಕೆ ಮುಖ್ಯಕಾರಣ. ಹೀಗೆ ಇಲ್ಲದ ಪ್ರಸಂಗಗಳನ್ನು ಸೃಷ್ಟಿಮಾಡುತ್ತಾ ಹೋದದ್ದರಿಂದಲೇ ಮುಂದಿನ ಶೂನ್ಯಸಂಪಾದನೆಗಳಲ್ಲಿ ಅನೇಕ ಖೊಟ್ಟಿ ವಚನಗಳು ಸೇರಿಕೊಂಡಿವೆ. ಇದನ್ನು ಡಾ. ಕಲಬುರ್ಗಿಯವರು ಸ್ಪಷ್ಟವಾಗಿ ಗುರುತಿಸಿದ್ದಾರೆ. ಆದಾಗ್ಯೂ ಶೂನ್ಯಸಂಪಾದನಾಕಾರರೂ ತರ್ಕಬದ್ಧವಾಗಿ ಜೋಡಿಸಿರುವ ಅನೇಕ ವಚನಗಳನ್ನು ಆ ಸಂದರ್ಭದಲ್ಲಿ ನಿಂತು ನೋಡಿದಾಗ ಅವು ಖೊಟ್ಟಿ ವಚನಗಳೆಂದು ಅನ್ನಿಸುವುದೇ ಇಲ್ಲ. ಅಷ್ಟೊಂದು ಸಹಜತೆ ಆ ರಚನೆಗಳಲ್ಲಿದೆ.

ಡಾ. ಆರ್. ಸಿ. ಹಿರೇಮಠ ಅವರು ತಾವು ಸಂಪಾದಿಸಿರುವ, ಗುಮ್ಮಳಾಪುರ ಸಿದ್ಧಲಿಂಗದೇವರು ಶೂನ್ಯಸಂಪಾದನೆಯ ಪ್ರಸ್ತಾವನೆಯಲ್ಲಿಯ"ಶೈವ ಪುರಾತನರ ಚರಿತ್ರೆಗಳಲ್ಲಿ ಶಿವನು ಬಗೆ ಬಗೆಯ ರೂಪದಿಂದ ಬಂದು ಭಕ್ತಜನರನ್ನು ಉದ್ಧ ರಿಸಿದಂತೆ ಸಾಕಾರ ಶಿವನಾದ ಈ ಪ್ರಭುದೇವರು ಬಗೆಬಗೆಯ ಹಾದಿಯಿಂದ ಭಕ್ತಪ್ರಮಥರನ್ನು ಉದ್ಧರಿಸುತ್ತಾನೆ." ಎಂಬ ಮಾತುಗಳಲ್ಲಿ ಈ ಶೂನ್ಯಸಂಪಾದನೆಗಳ ಮೂಲ ಉದ್ದೇಶವನ್ನು ಸರಿಯಾಗಿಯೇ ಗುರುತಿಸಿದ್ದಾರೆ. ಶಿವನನ್ನು ಕೇಂದ್ರೀಕ ರಿಸುವ ಭಕ್ತಿ ಶೈವಪುರಾತನರದಾದರೆ, ಶಿವನನ್ನು ವಿಕೇಂದ್ರೀಕರಿಸುವ, ಶಿವನಿಗಿಂತ ಶಿವಶರಣರೇ ಅಧಿಕವೆಂದು ಹೇಳುವ ಆಶಯ ವಚನಕಾರರದು. ಶಿವಕೇಂದ್ರಿತ ದೇವಾಲಯಗಳತ್ತ ಶೈವಪುರಾತನರು ಬಂದರೆ, ಜೀವಕೇಂದ್ರಿತ ಜನಸಮುದಾಯದತ್ತ ಹೋಗಲು ಶರಣರು ಹಾತೊರೆದಿದ್ದಾರೆ. ದೇವ ಭವ್ಯನಾಗುವ ಪರಿ ಅಲ್ಲಿದ್ದರೆ, ಜೀವ ದೇವನಾಗುವ ಹೋರಾಟ ಇಲ್ಲಿದೆ.

ಗುಮ್ಮಳಾಪುರದ ಸಿದ್ಧಲಿಂಗದೇವರ ಶೂನ್ಯಸಂಪಾದನೆಯಲ್ಲಿ ಅಲ್ಲಮಪ್ರಭು, ಮುಕ್ತಾಯಕ್ಕ, ಸಿದ್ಧರಾಮ, ಬಸವಣ್ಣ, ಚೆನ್ನಬಸವಣ್ಣ, ಮರುಳಶಂಕರದೇವ, ಮಡಿವಾಳ ಮಾಚಿದೇವ, ಆಯ್ದಕ್ಕಿ ಮಾರಯ್ಯ, ಲಕ್ಕಮ್ಮ, ನುಲಿಯ ಚಂದಯ್ಯ ಮತ್ತು ಅಕ್ಕಮಹಾದೇವಿಯರು ಪರಿಪೂರ್ಣ ಶೂನ್ಯವನ್ನು ಸಂಪಾದಿಸಿದ ಸ್ಥಿತಿಯನ್ನು ನಿರೂಪಿಸಲಾಗಿದೆ. ಇಲ್ಲಿ ಬರುವ ಶರಣರ ವ್ಯಕ್ತಿತ್ವವನ್ನು, ಅವರ ಆತ್ಮಮುಖಿ–ಸಮಾಜಮುಖಿ ಗುಣವನ್ನು ಗುಮ್ಮಳಾಪುರದ ಸಿದ್ಧಲಿಂಗದೇವರ ಶೂನ್ಯಸಂಪಾದನೆ ಅನಾವರಣಗೊಳಿಸುವಲ್ಲಿ ಯಶಸ್ವಿಯಾಗಿದೆ. ಶೂನ್ಯಸಂಪಾದನೆಯಲ್ಲಿ ಬರುವ ವಿವಿಧ ಪ್ರಸಂಗಗಳಲ್ಲಿ ಅಂದರೆ, ಮುಕ್ತಾಯಕ್ಕನ ಪ್ರಸಂಗದಲ್ಲಿ ಬರುವ ಗುರುಕರುಣೆಯ

ಮಹತ್ವ, ಸಿದ್ಧರಾಮರ ಪ್ರಸಂಗದಲ್ಲಿ ಬರುವ ಇಷ್ಟಲಿಂಗದ ಶ್ರೇಷ್ಠತೆ ಹಾಗೂ ಆಧ್ಯಾತ್ಮಿಕ ಆನಂದ ಅನುಭಾವ, ಗುಪ್ತಭಕ್ತ ಮರುಳ ಶಂಕರನ ಗುಪ್ತಭಕ್ತಿಯಿಂದ ಗಳಿಸಿದ ಸಂಪಾದನೆಯ ನಿಲುವು, ಮಡಿವಾಳ ಮಾಚಿದೇವ, ಮಾರಯ್ಯ, ಚಂದಯ್ಯಗಳ ಕಾಯಕ ನಿಷ್ಠೆ, ಘಟ್ಟಿವಾಳಯ್ಯನ ನಿಷ್ಠುರವಾದ ಸತ್ಯ ಪ್ರತಿಪಾದನೆ ಇತ್ಯಾದಿಗಳಲ್ಲಿ ಅಂತರಂಗದನುಭವವನ್ನು, ಅನುಭಾವವನ್ನು, ಧರ್ಮಸಿದ್ಧಾಂತದ ಹಾಗೂ ಸಾಮಾಜಿಕ ಚಿಂತನೆಯ ಚೌಕಟ್ಟಿನಲ್ಲಿ ಪ್ರತಿಪಾದಿಸಿರುವುದನ್ನು ಗುರುತಿಸಬಹುದು. ಧಾರ್ಮಿಕ ಸಾಧನೆಯ ಮಹತ್ವವು ಶರಣರ ನಿತ್ಯ ಜೀವನದಲ್ಲಿಯೇ ಕಾಣಬರುತ್ತದೆಂಬುದನ್ನು ಶೂನ್ಯಸಂಪಾದನೆಯಲ್ಲಿ ಕಾಣಬಹುದು. ಜೀವನದಲ್ಲಿ ವ್ಯಕ್ತಿ ಸತ್ಯಶುದ್ಧ ಕಾಯಕದಲ್ಲಿ ನಿರತನಾಗಿದ್ದರೆ ಅವನು ಯಾವುದೇ ರಂಗದಲ್ಲಿದ್ದರೂ ಏನೇ ಉದ್ಯೋಗವನ್ನು ಅವಲಂಬಿಸಿದ್ದರೂ ಆತನ ಸಾಧನೆಗೆ ಪ್ರಗತಿಗೆ ಅಡ್ಡಿಯಾಗುವುದಿಲ್ಲ ಎಂಬುದು ವ್ಯಕ್ತವಾಗಿದೆ. ಶೂನ್ಯಸಂಪಾದನೆಯಲ್ಲಿ ಆಧುನಿಕ ಯುಗದ ಮನೋಧರ್ಮಕ್ಕೆ ಹತ್ತಿರವಾದುದ್ದು ಎಂದರೆ ಸ್ವತಂತ್ರ ವಿಚಾರಶೀಲತೆ ಮತ್ತು ಸತ್ಯ ನಿಷ್ಠುರತೆ.

ಈತನು ತನ್ನ ಶೂನ್ಯ ಸಂಪಾದನೆಯ ಪರಿಷ್ಕರಣದಲ್ಲಿ 39 ವಚನಕಾರರ 1337 ವಚನಗಳು ಮತ್ತು 18 ಸ್ವರವಚನಗಳನ್ನು ಬಳಸಿದ್ದಾನೆ. ಈತನ ಶೂನ್ಯ ಸಂಪಾದನಾ ಕೃತಿಯಲ್ಲಿ ಹೆಚ್ಚಿನ ಶರಣರ ವಚನಗಳು ಸಂದರ್ಭಕ್ಕನುಸಾರವಾಗಿ ಸೇರಲ್ಪಟ್ಟಿವೆ. ಬಸವಣ್ಣ–ಚೆನ್ನಬಸವಣ್ಣ–ಪ್ರಭುದೇವರು 'ಜಗಹಿತಾರ್ಥವಾಗಿ ಮರ್ತ್ಯಕ್ಕೆ ಅವತರಿಸಿ ಬಂದರೆನ್ನುವ ತನ್ನ ಅಚಲ ವಿಶ್ವಾಸವನ್ನು ಮೊದಲಿಗೆ ಪ್ರಕಟಪಡಿಸಿದವನು ಗುಮ್ಮಳಾಪುರದ ಸಿದ್ದಲಿಂಗ. ಈ ಮೂವರು ಮರ್ತ್ಯಕ್ಕೆ ಅವತರಿಸಿ ಬಂದುದಕ್ಕೆ ಕಾರಣ ಕೈಲಾಸದಲ್ಲಿನ ಶಿವನ ಶಾಪದಿಂದಲ್ಲ. ಹಾಗೆ ಶಾಪದಿಂದ ಅವತರಿಸಿದರು ಎಂದು ಹರಿಹರ ತನ್ನ ರಗಳೆಗಳಲ್ಲಿ ಹೇಳಿರುವುದನ್ನು ಪರೋಕ್ಷವಾಗಿ ತೀಕ್ಷ್ಣವಾಗಿ ಖಂಡಿಸುತ್ತಾ ಆವನಾನೊಬ್ಬನು ನುಡಿವುತ್ತಿದ್ದಾನು ಅವನು ಇಪ್ಪತ್ತೆಂಟು ಕೋಟಿ ನರಕದಲ್ಲಿ ರವಿಶಶಿಯುಳ್ಳನ್ನಬರ ನರಕವನನುಭವಿಸುತ್ತಿಪ್ಪನು' ಎಂದು (ಹರಿಹರನ ಹೆಸರನ್ನೂ ಹೇಳಲು ಇಷ್ಟಪಡದೆ) ಹೇಳಿ, ತನ್ನ ಮಾತಿಗೆ ಸಾಕ್ಷಿಯಾಗಿ ಚೆನ್ನಬಸವಣ್ಣನ 'ಕೃತಯುಗದಲ್ಲಿ ಜಗದ್ಹಿತಾರ್ಥವಾಗಿ...' ಎಂದು ಪ್ರಾರಂಭವಾಗುವ ವಚನವನ್ನು ಗುಮ್ಮಳಾಪುರದ ಸಿದ್ಧಲಿಂಗನು ಉಲ್ಲೇಖಿಸುವನು. ಇದು 13ನೇ ಶತಮಾನದ ಕವಿಗಳ ಕೃತಿಗಳ ನಾಯಕರ ಅವತಾರ ಕಲ್ಪನೆಗೆ ಪರ್ಯಾಯವಾದ 15ನೇ ಶತಮಾನದ ಧಾರ್ಮಿಕ ಶ್ರದ್ಧಾವಂತ ಮನಸ್ಸಿನ ತೀಕ್ಷ್ಣ ಪ್ರತಿಕ್ರಿಯೆಯಂತೆ ತೋರುತ್ತದೆ.

ಸದ್ಯಕ್ಕೆ ಮಾನ್ಯ ಮಾಡಿರುವ ನಾಲ್ಕು ಜನ ಶೂನ್ಯ ಸಂಪಾದಕರಲ್ಲಿ ಗೂಳೂರು ಸಿದ್ಧವೀರಣ್ಣೊಡೆಯ ನಾಲ್ಕನೆಯವನಾಗಿದ್ದಾನೆ. ಸಿದ್ಧವೀರಣಾರ್ಯನು

ತೋಂಟದ ಸಿದ್ಧಲಿಂಗ ಶಿವಯೋಗಿಗಳ ಶಿಷ್ಯಪರಂಪರೆಯಲ್ಲಿಯೇ ಬಂದು ಅವರ ಪ್ರಶಿಷ್ಯರಾಗಿ ಗುಮ್ಮಳಾಪುರ ಸಿದ್ಧಲಿಂಗಯತಿಯ ತರುವಾಯ ಶೂನ್ಯಪೀಠದ ಅಧ್ಯಕ್ಷರಾನಾಗಿದ್ದು, ತುಮಕೂರು ಜಿಲ್ಲೆಗೆ ಸಂಬಂಧಪಟ್ಟವನಾಗಿದ್ದಾನೆ. ಗೂಳೂರು ಸಿದ್ಧವೀರೇಶ್ವರ ದೇವರು ತೋಂಟದ ಸಿದ್ಧಲಿಂಗಯತಿಗಳ ಶಿಷ್ಯರಾದ ನಾಗವಲ್ಲಿಯ ಬೋಳಬಸವರ ಶಿಷ್ಯನಾಗಿದ್ದು, ಶೂನ್ಯಸಂಪಾದನೆಯ ಸಂಕಲನಕಾರನಾಗಿದ್ದಾನೆ. ಗುಮ್ಮಳಾಪುರದ ಸಿದ್ಧಲಿಂಗರ ಪ್ರಭಾವ ತನ್ನ ಮೇಲೆ ಆಗಿರುವ ಬಗೆಗೆ ಸ್ವತಹ ಗೂಳೂರು ಸಿದ್ಧವೀರಣ್ಣೊಡೆಯನೇ ಕೃತಿಯ ಕೊನೆಯಲ್ಲಿ ಉಲ್ಲೇಖಿಸಿದ್ದಾನೆ. ಗೂಳೂರು ಸಿದ್ಧವೀರಣ್ಣೊಡೆಯನು ತನ್ನ ಕೃತಿಯ ಸಮಾಪ್ತಿ ವಾಕ್ಯದಲ್ಲಿ ಬರುವ ಗದ್ಯಭಾಗ ಮತ್ತು ಅನಂತರ ಬರುವ ಮೂರು ವೃತ್ತ ಮತ್ತು ಕಂದಪದ್ಯಗಳಲ್ಲಿ ತನ್ನ ಕೃತಿ ಬಗ್ಗೆ ಮತ್ತು ಗುರುಪರಂಪರೆಯ ಬಗೆಗೆ ವಿಸ್ತಾರವಾಗಿ ಹೇಳಿಕೊಂಡಿದ್ದಾನೆ. ಈತನು ತನ್ನ ಗುರುವಿನ ಹೆಸರನ್ನು ಹೇಳುವಾಗ ತೋಟದ ಸಿದ್ಧಲಿಂಗರನ್ನು ಮತ್ತು ಬೋಳಬಸವರಿಬ್ಬರನ್ನು ಪ್ರಸ್ತಾಪ ಮಾಡುತ್ತಾನೆ. ಈತ ಶೂನ್ಯಸಂಪಾದನೆಯ ಪರಿಷ್ಕರಣವನ್ನು ಕೈಗೆತ್ತಿಕೊಂಡಿದ್ದು ಗಮನಾರ್ಹವಾದುದಾಗಿದೆ. ಕ್ರಿ.ಶ. 1603ರಲ್ಲಿ ಜಿಲ್ಲೆಯ ಹಸ್ತಪ್ರತಿ ಪುಷ್ಪಿಕೆಯ ಉಲ್ಲೇಖವು, ಬಿಜ್ಜಾವರದ ಮಹಾನಾಡು ಪ್ರಭುವಾದ ಇಮ್ಮಡಿ ಚಿಕ್ಕಭೂಪಾಲನು ಪಂಚಪ್ರಕಾರ ಗದ್ಯಗಳನ್ನು ಭಕ್ತಿಯಿಂದ ಬರೆಯಿಸಿ ಗೂಳೂರು ಸಿದ್ಧವೀರೇಶ್ವರದೇವರ ಶ್ರೀಪಾದ ಪದ್ಮಕ್ಕೆ ಅರ್ಪಿಸಿರುವುದು ತಿಳಿದುಬರುತ್ತದೆ. (ಸಿ. ನಾಗಭೂಷಣ, ಕನ್ನಡ ಸಾಹಿತ್ಯ–ಸಂಸ್ಕೃತಿ ಬಾಗಿನ, ಪು.168) ಮತ್ತೊಂದು ಪುಷ್ಪಿಕೆಯ ಅಂತ್ಯದಲ್ಲಿ "ಸ್ವಸ್ತಿ ಶ್ರೀ ಜಯಾಭ್ಯುದಯ ಸಾಲಿವಾಹನ ಶಕ ವರುಷ 1538 ನೆಯ ನಳನಾಮ ಸಂವತ್ಸರ ಮಾಘ ಬಹುಳ 14 ಸೋಮವಾರದಲ್ಲಿ ಗೂಳೂರಸಿದ್ಧವೀರೊಣ್ಣಡೆಯನಿಗೆ ನಂದಿಯ ಪುರದ ಪರ್ವತದೇವರ ಶಿಷ್ಯರು ತೋಟದ ದೇವರು ಲೇಖನ ಮಾಡಿದ ಪ್ರಭುದೇವರ ಶೂನ್ಯಸಂಪಾದನೆ ಸಮಾಪ್ತ ಮಂಗಳ ಮಹಾಶ್ರೀ" ಎಂದು ಈ ಪ್ರಶಸ್ತಿ ವಾಕ್ಯವು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿರುವ ಹಸ್ತಪ್ರತಿ ಭಂಡಾರದಲ್ಲಿಯ ಗೂಳೂರು ಶೂನ್ಯ ಸಂಪಾದನೆಯ ಕಾಗದ ಪ್ರತಿಯ ಕೊನೆಯಲ್ಲಿ ಬರೆಯಲಾಗಿದೆ. ಇದ ರಿಂದ ಈ ಹಸ್ತಪ್ರತಿ ಕ್ರಿ.ಶ.1616 (1538+78=1616)ರಲ್ಲಿ ರಚಿತವಾದುದೆಂದೂ ಇದನ್ನು ಗೂಳೂರ ಸಿದ್ಧವೀರಣ್ಣೊಡೆಯನಿಗೆ (ಅಂದರೆ ಸ್ವತಃ ಕರ್ತೃವಿಗೆ) ನಂದಿಯ ಪುರದ ಪರ್ವತದೇವರ ಶಿಷ್ಯ ತೋಟದಯ್ಯ ಪ್ರತಿ ಮಾಡಿ ಕೊಟ್ಟನೆಂದೂ ತಿಳಿದು ಬರುವುದರಿಂದ ಇದು ಕರ್ತೃವಿನ ಜೀವಿತಕಾಲದಲ್ಲಿಯೇ ಸಿದ್ಧಪಡಿಸಿದ ಪ್ರತಿಯಾಗಿದೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದರ ಇನ್ನೊಂದು ಕಾಗದದ ಹಸ್ತಪ್ರತಿ ಮೈ.ವಿ.ವಿ. ಹಸ್ತಪ್ರತಿ ಭಂಡಾರದಲ್ಲಿರುವುದಾಗಿ ತಿಳಿದು ಬಂದಿದೆ.

ಈ ಶೂನ್ಯಸಂಪಾದನೆಯನ್ನು ರಚಿಸಿದ ಪದ್ಧತಿಯು ಹೊಸ ಮಾದರಿಯದಾಗಿದೆ. ಈ ಪದ್ಧತಿಯನ್ನು ಅವನಿಗಿಂತ ಪೂರ್ವದಲ್ಲಿ ಯಾರೂ ಅನುಸರಿಸಿಲ್ಲ. 'ಶೂನ್ಯಸಂಪಾದನೆ'ಯ ಮೂಲಶಿಲ್ಪಿಯಾದ ಶಿವಗಣಪ್ರಸಾದಿ ಮಹಾದೇವಯ್ಯನ ಕೃತಿಯನ್ನು 186 ವರ್ಷಗಳ ಕಾಲಾವಧಿಯಲ್ಲಿ ಮೂರು ಜನ ಅನುಭಾವಿಗಳು ಮರುಪರಿಷ್ಕರಣಕ್ಕೊಳಪಡಿಸಿದ್ದಾರೆ. ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆಯನ್ನು 3ನೇ ಬಾರಿ ಮತ್ತು ಕೊನೆಯದಾಗಿ ಪರಿಷ್ಕರಣ ಮಾಡಿದವನು ಗೂಳೂರು ಸಿದ್ಧವೀರಣ್ಣೊಡೆಯ.

ಗೂಳೂರು ಸಿದ್ಧವೀರಣ್ಣೊಡೆಯನ ಶೂನ್ಯಸಂಪಾದನೆ ನಾಲ್ಕನೆಯದಾಗಿದ್ದರೂ ಜನಪ್ರಿಯತೆ, ಪ್ರಸಿದ್ಧಿ ಮತ್ತು ಪ್ರಕಟಣೆಯ ದೃಷ್ಟಿಯಿಂದ ಎಲ್ಲಕ್ಕಿಂತ ಮೊದಲನೆಯದ್ದು. ಕ್ರಿ.ಶ. 1930 ರಲ್ಲಿ ಫ. ಗು. ಹಳಕಟ್ಟಿಯವರು ತಮ್ಮ ಶಿವಾನುಭವ ಗ್ರಂಥಮಾಲಿಕೆಯ ಮೂಲಕ ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯಸಂಪಾದನೆಯನ್ನು ಸಂಪಾದಿಸಿ ಪ್ರಥಮ ಬಾರಿಗೆ ಪ್ರಕಟಿಸಿದರು. ನಂತರದಲ್ಲಿ ಈ ಶೂನ್ಯಸಂಪಾದನೆಯನ್ನು 1958 ರಲ್ಲಿ ಶಿ. ಶಿ. ಭೂಸನೂರಮಠ ಅವರು ಸಂಪಾದಿಸಿ ಗುಲಬರ್ಗಾ ಜಿಲ್ಲೆಯ ರಾವೂರ ಶ್ರೀ. ಸಿದ್ಧಲಿಂಗೇಶ್ವರ ಮಠದ ಮೂಲಕ ಪ್ರಕಟಿಸಿದರು. 1958ರಲ್ಲಿ ಸಂ. ಶಿ. ಭೂಸನೂರಮಠರು ಇದನ್ನೇ ಮತ್ತೊಮ್ಮೆ ಶಾಸ್ತ್ರೀಯವಾಗಿ ಪರಿಷ್ಕರಿಸಿ ಪ್ರಕಟಿಸಿದರು. 1965, 1986, 1999ರಲ್ಲಿ ಮರುಮುದ್ರಣಗಳು ಹೊರಬಂದವು. ಈ ಕೃತಿಯನ್ನೇ ಆಧರಿಸಿ ಭೂಸನೂರ ಮಠರು 1969ರಲ್ಲಿ 'ಶೂನ್ಯಸಂಪಾದನೆಯ ಪರಾಮರ್ಶೆ"ಎಂಬ ಬೃಹತ್ ವ್ಯಾಖ್ಯಾನ ಗ್ರಂಥವನ್ನು ರಚಿಸಿದರು. ಜ.ಚ.ನಿ. ಅವರಿಂದ "ಸಂಪಾದನೆಯ ಸೊಂಪು" ಗ್ರಂಥದ ನಾಲ್ಕು ಸಂಪುಟಗಳು ಹೊರಬಂದವು (1977–79). ಜೋಳದರಾಶಿ ದೊಡ್ಡನಗೌಡರ "ಬಯಲಗಳಿಕೆಯ ಬೆಳಗು" ಕೂಡ ಇದೇ ಕೃತಿಯನ್ನು ಆಧರಿಸಿದೆ (1985) ಮಠ–ಮಾನ್ಯಗಳಲ್ಲಿ ಪ್ರವಚನ ಗಂಥವಾಗಿ, ವಿಶ್ವವಿದ್ಯಾಲಯಗಳಲ್ಲಿ' ಪಠ್ಯಪುಸ್ತಕವಾಗಿ ಇದು ಬಳಕೆಗೊಂಡಿತು. ಇದರ ಇಂಗ್ಲಿಷ್ ಅನುವಾದವನ್ನು ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಸಿತು (1965–72). ನಂತರದಲ್ಲಿ ಎಂ. ಎಂ. ಕಲಬುರಗಿ ಮತ್ತು ವೀರಣ್ಣ ರಾಜೂರ ಅವರು ಈ ಶೂನ್ಯಸಂಪಾದನೆಯನ್ನು ಸಂಪಾದಿಸಿ ಗದುಗಿನ ಲಿಂಗಾಯತ ಅಧ್ಯಯನಸಂಸ್ಥೆಯ ಮೂಲಕ 2016 ರಲ್ಲಿ ಪ್ರಕಟಿಸಿದ್ದಾರೆ. ಈ ಕೃತಿ ಪರಿಷ್ಕರಣಕ್ಕೆ ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಅಧ್ಯಯನಕೇಂದ್ರದ ಹಸ್ತಪ್ರತಿ ಭಾಂಡಾರಕ್ಕೆ ಸೇರಿದ ತಾಡವೋಲೆ ಪ್ರತಿ ಸಂಖ್ಯೆ–ಕೆ. 229 ನ್ನು ಮೂಲ ಪ್ರತಿಯಾಗಿ ಬಳಸಿಕೊಂಡಿದ್ದಾರೆ ಮತ್ತು ಪ್ರೊ. ಭೂಸನೂರಮಠ ಅವರ ಮುದ್ರಿತ ಕೃತಿಯನ್ನು ಪೂರಕ ಪ್ರತಿಯನ್ನಾಗಿ ಸ್ವೀಕರಿಸಿ ಸಂಪಾದನೆ ಮಾಡಿದ್ದಾರೆ.

ಗೂಳೂರು ಸಿದ್ಧವೀರಣ್ಣೊಡೆಯನ ಶೂನ್ಯಸಂಪಾದನೆಯು ಹಿಂದಿನ ಮೂರು ಸಂಪಾದನೆಗಳಿಗಿಂತ ಹೆಚ್ಚು ಅಚ್ಚುಕಟ್ಟಾಗಿ ಬಂದಿದೆ. ವಿದ್ವಾಂಸರಿಂದ ವಿಮರ್ಶಾ ಗಂಥಗಳು, ಬಿಡಿ ಲೇಖನಗಳು ಹುಟ್ಟಿಕೊಂಡಿವೆ. ಹೀಗೆ ಅನೇಕ ರೀತಿಯಲ್ಲಿ ಇದಕ್ಕೆ ದೊರೆತ ಪ್ರಚಾರದಿಂದಾಗಿ, "ಶೂನ್ಯಸಂಪಾದನೆ"ಎಂದರೆ ಗೂಳೂರು ಸಿದ್ಧವೀರಣ್ಣನ "ಶೂನ್ಯಸಂಪಾದನೆ'ಯೇ ಎನ್ನುವಷ್ಟರ ಮಟ್ಟಿಗೆ ಇದು ಜನಮನದಲ್ಲಿ ಬೇರೂರಿತು. ಸಿದ್ಧವೀರಣಾಚಾರ್ಯನನ್ನು ನಾವು ಕರ್ನಾಟಕದ ಪ್ಲೇಟೊ ಎಂದು ಕರೆಯಬಹುದು ಎಂಬ ಹಳಕಟ್ಟಿಯವರ ಮಾತು ವಿಚಾರಾರ್ಹವಾಗಿದೆ. (ಫ. ಗು. ಹಳಕಟ್ಟಿ. 1930: ಪ್ರಸ್ತಾವನೆ ಪು. 3–4) ಇಂದಿಗೂ ಹೆಚ್ಚು ಪ್ರಸಾರದಲ್ಲಿದ್ದು. ತನ್ನ ಅಚ್ಚಳಿಯದ ಜನಪ್ರಿಯತೆಯನ್ನು ಹಚ್ಚಹಸಿರಾಗಿ ಉಳಿಸಿಕೊಂಡಿರುವ ಶೂನ್ಯ ಸಂಪಾದನೆಯು ಗೂಳೂರು ಸಿದ್ದವೀರಣ್ಣೊಡೆಯನ 'ಶೂನ್ಯಸಂಪಾದನೆ'ಯೇ ಆಗಿದ್ದು ಅದು ತುಮಕೂರು ಜಿಲ್ಲೆಯ ಕೊಡುಗೆ ಎಂಬುದು ಗಮನಿಸತಕ್ಕ ಸಂಗತಿಯಾಗಿದೆ. ಇಂದು ಆಧುನಿಕ ಕಾಲ ಘಟ್ಟದಲ್ಲಿ ಶೂನ್ಯ ಸಂಪಾದನೆಯ ಕುರಿತು ಬಂದಿರುವ ಹೊಸ ನೆಲೆಯ ಕೃತಿಗಳಿಗೆ ಮೂಲ ಈ ಶೂನ್ಯ ಸಂಪಾದನೆಯೇ ಆಗಿದೆ.

ಶೂನ್ಯಸಂಪಾದನೆಯ ಪರಿಷ್ಕರಣಗಳಲ್ಲಿ ಹೊಸ ಹೊಸ ಪ್ರಸಂಗಗಳು ಕೂಡಿಕೊಂಡು ಜೊತೆಜೊತೆಯಲ್ಲಿಯೇ ಮೂಲದಲ್ಲಿದ್ದ ಪ್ರಸಂಗಗಳು ಅರ್ಥಪೂರ್ಣವಾಗಿ ಮೂಡಿಬರಲು ತುಮಕೂರು ಜಿಲ್ಲೆಯ ತೋಂಟದಸಿದ್ಧಲಿಂಗಯತಿಗಳು ಮತ್ತು ಅವರ ಶಿಷ್ಯ–ಪ್ರಶಿಷ್ಯ ಪರಂಪರೆಯೇ ಪ್ರಮುಖ ಕಾರಣವಾಗಿದೆ.

ಈತನು ಹಿಂದಿನ ಶೂನ್ಯಸಂಪಾದನೆಯಲ್ಲಿ ಕಂಡುಬಂದಿರುವ ಸಮಸ್ಯೆಗಳಿಗೆ ತನಗೆ ಅನಿಸಿದ ರೀತಿಯಲ್ಲಿ ಪರಿಹಾರವನ್ನು ಹೇಳುತ್ತಾ, ಕೆಲವು ಹೊಸ ಸಂಗತಿಗಳನ್ನು ಸೇರಿಸುವುದರೊಂದಿಗೆ, ಹಿಂದಿನವರು ಅಖಂಡವಾಗಿ ಹೇಳಿರುವುದನ್ನು 21 ಖಂಡವನ್ನಾಗಿ ಮಾಡಿ ಅವುಗಳಿಗೆ 'ಸಂಪಾದನೆ' ಎಂಬ ಹೆಸರನ್ನು ಕೊಡುವುದರ ಜೊತೆಗೆ ವ್ಯವಸ್ಥಿತವಾದ ರೂಪವನ್ನು ಕೊಟ್ಟಿರುವನು. ಗೂಳೂರು ಸಿದ್ಧವೀರಣ್ಣೊಡೆಯನು ಪರಿಷ್ಕರಣದ ಮೂಲಕ ಅದಕ್ಕೆ ಒಂದು ಹೊಸ ರೂಪವನ್ನು ಕೊಟ್ಟನು. ಉಪದೇಶದ ಆರಂಭದಲ್ಲಿ ಕಂದ ಪದ್ಯ ಬಳಸಿರುವುದು ಕಂಡು ಬರುತ್ತದೆ. ಉಪದೇಶದ ಕೊನೆಯಲ್ಲಿ ಸಮಾಪ್ತಿಯ ಗದ್ಯವನ್ನು ಬರೆದು ಉಪದೇಶದ ಹೆಸರೂ ಹಾಗೂ ಅದುವರೆಗೂ ಬಳಸಿಕೊಂಡಿರುವ ಸಂಖ್ಯೆಯನ್ನು ಕೊಟ್ಟಿದ್ದಾನೆ. ಇವನ ವಿಭಾಗ ಕ್ರಮದ ಅನುಕ್ರಮಣಿಕೆ ಮೊದಲ ಮೂರು ಶೂನ್ಯ ಸಂಪಾದನಾಕಾರರಲ್ಲಿ ಗೋಚರಿಸುವುದಿಲ್ಲ ಆದ್ದರಿಂದ ಇದು ಹೊಸತನವಾದುದೆಂದೆನಿಸುತ್ತದೆ. ಕನ್ನಡ ಸಾಹಿತ್ಯವಲ್ಲದೇ ವಿಶ್ವ ಸಾಹಿತ್ಯದಲ್ಲಿಯೇ

ವಿಶೇಷವಾದ ಸ್ಥಾನವನ್ನು ಶೂನ್ಯ ಸಂಪಾದನೆಯು ಪಡೆಯುವಲ್ಲಿ ಗೂಳೂರು ಸಿದ್ಧವೀರಣ್ಣೊಡೆಯನ ಪಾತ್ರವು ಹಿರಿದು.

ಈ ಶೂನ್ಯಸಂಪಾದನೆಯಲ್ಲಿ ಇಪ್ಪತ್ತೊಂದು ಉಪದೇಶಗಳಿವೆ ಹಾಗೂ ಮೋಳಿಗೆಯ ಮಾರಯ್ಯ ಮತ್ತು ಗಟ್ಟಿವಾಳಯ್ಯ ಎಂಬ ಎರಡು ಹೊಸ ಸನ್ನಿವೇಶಗಳನ್ನು ನಿರೂಪಿಸಿದ್ದಾನೆ. ಶೂನ್ಯ ಸಂಪಾದನೆಯು ಶಿವಗಣಪ್ರಸಾದಿ ಮಹಾದೇವಯ್ಯನಿಂದ ಪ್ರಾರಂಭವಾಗಿ ಗೂಳೂರು ಸಿದ್ಧವೀರಣ್ಣೊಡೆಯರಲ್ಲಿ ಪೂರ್ಣತೆ ಪಡೆದಿದೆ ಎಂದೇಳಬಹುದು. ಶಿವಗಣಪ್ರಸಾದಿಯಿಂದ ರಚನೆಯಾದ ಶೂನ್ಯಸಂಪಾದನೆಯನ್ನು ಮುಂದೆ ಪರಿಷ್ಕರಣಗೊಳ್ಳುತ್ತಾ ಕೆಲವು ಸಂಗತಿಗಳು ಸೇರುತ್ತಾ, ಕೆಲವು ಬಿಡುತ್ತಾ, ಗಾತ್ರವು ಚಿಕ್ಕದು–ದೊಡ್ಡದಾಗುತ್ತಾ ಕೊನೆಗೆ ಈ ಪರಿಷ್ಕರಣ ಕಾರ್ಯಕ್ಕೆ ಸಂಪೂರ್ಣ ಸಮಾಪ್ತಿಯು ಗೂಳೂರು ಸಿದ್ಧವೀರಣ್ಣೊಡೆಯನಿಂದಾಯಿತು.

ಶೂನ್ಯಸಂಪಾದನೆಯ ಪರಿಷ್ಕರಣಗಳಲ್ಲಿ ಹೊಸ ಹೊಸ ಪ್ರಸಂಗಗಳು ಕೂಡಿಕೊಂಡು ಜೊತೆಜೊತೆಯಲ್ಲಿಯೇ ಮೂಲದಲ್ಲಿದ್ದ ಪ್ರಸಂಗಗಳು ಅರ್ಥ ಪೂರ್ಣವಾಗಿ ಗೂಳೂರು ಸಿದ್ಧವೀರಣ್ಣೊಡೆಯರು ಸಂಗ್ರಹಿಸಿದ ಪ್ರಭುದೇವರ ಶೂನ್ಯಸಂಪಾದನೆಯಲ್ಲಿ ಮೂಡಿಬಂದಿದೆ. ಶೂನ್ಯಸಂಪಾದನೆಯಲ್ಲಿ ಬಂದಿರುವ ಕಂದ ವೃತ್ತಗಳು ಶೂನ್ಯ ಸಂಪಾದನಾಕಾರನ ಕವಿತಾ ರಚನೆಯ ಸಾಮರ್ಥ್ಯಕ್ಕೆ ನಿದರ್ಶನಗಳಾಗಿವೆ ಎಂದು ಹೇಳಬಹುದು. ಈ ಶೂನ್ಯ ಸಂಪಾದನೆ ಕೃತಿಯ ಸ್ವರೂಪವೆಂದರೆ, ಇದರ ಪ್ರತಿ ಅಧ್ಯಾಯದ ಆರಂಭದಲ್ಲಿ ಒಂದೊಂದು ಕಂದಪದ್ಯವಿದ್ದು, ಅದರಲ್ಲಿ ಆ ಭಾಗದ ಪ್ರಸಂಗದ ಸಾರಸಂಗ್ರಹ ಕೊಡಲಾಗಿದೆ. ಗೂಳೂರು ಸಿದ್ಧವೀರಣ್ಣೊಡೆಯನು ಈ ಶೂನ್ಯಸಂಪಾದನೆಯನ್ನು ಸಂಕಲಿಸುವಲ್ಲಿ ಒಟ್ಟು 1450 ವಚನಗಳು, 21 ಹಾಡುಗಳನ್ನು ಬಳಸಿದ್ದಾನೆ. ಸಿದ್ಧವೀರಣ್ಣೊಡೆಯನ ಶೂನ್ಯಸಂಪಾದನೆಯನ್ನು ಅಭ್ಯಾಸ ಮಾಡಿದರೆ ವಚನಕಾರರ ತಾತ್ವಿಕ ನಿಲುವುಗಳ ಪರಿಚಯವಾಗುತ್ತದೆಂಬ ಹೇಳಿಕೆಯಲ್ಲಿ ಅತಿಶಯೋಕ್ತಿಯಾಗಲಾರದು. ವಚನಗಳನ್ನು ಅರ್ಥಪೂರ್ಣವಾಗಿ ಕ್ರಮಬದ್ಧವಾಗಿ ಗ್ರಹಿಸಿಕೊಡುವುದು ಸುಲಭವಾದ ಕೆಲಸವಾಗಿರಲಿಲ್ಲ. ಈ ರೀತಿಯ ಸಾಹಸದಲ್ಲಿ ತೊಡಗುವವರಿಗೆ ತಾಳ್ಮೆ ಹಾಗೂ ಪಾಂಡಿತ್ಯ ಬೇಕಿತ್ತು. ಅಂತಹ ತಾಳ್ಮೆ ಹಾಗೂ ಪಾಂಡಿತ್ಯ ಹೊಂದಿದ್ದವನು ಗೂಳೂರು ಸಿದ್ಧವೀರಣಾರ್ಯ ಎಂಬುದು ಈ ಶೂನ್ಯ ಸಂಪಾದನೆಯಿಂದ ತಿಳಿಯುತ್ತದೆ.

ಶೂನ್ಯವನ್ನು ಸಂಪಾದಿಸಿದ ಹಲವು ಶರಣರ ಚರಿತ್ರೆಗಳು ಈ ಶೂನ್ಯ ಸಂಪಾದನೆಯಲ್ಲಿ ಕಾಣಬರುತ್ತವೆ. ಶೂನ್ಯ ಸಂಪಾದನೆಯಲ್ಲಿ ಅಲ್ಲಮಪ್ರಭುವೇ ಕೇಂದ್ರ ವ್ಯಕ್ತಿಯಾದ್ದರಿಂದ ಶೂನ್ಯ ಸಂಪಾದನೆಗೆ ಪ್ರಭುದೇವರ ಶೂನ್ಯ ಸಂಪಾದನೆ

ಎಂಬ ಪರ್ಯಾಯ ಹೆಸರು ಉಂಟು. ಅಲ್ಲಮಪ್ರಭು ತನ್ನ ಜೀವಿತದುದ್ದಕ್ಕೂ ಹಲವಾರು ವ್ಯಕ್ತಿಗಳನ್ನು ಸಂದರ್ಶಿಸಿದವನು. ನಿಜವಾಗಿಯೂ ಜ್ಞಾನಿಯಾಗಿದ್ದರೂ ಅಣ್ಣನ ಸಾವಿನಿಂದ ಜರ್ಝರಿತವಾಗಿ ಶೋಕಿಸುತ್ತಿದ್ದ ಮುಕ್ತಾಯಕ್ಕ, ಕೇವಲ ಲೌಕಿಕ ಕಾಯಕದಲ್ಲಿಯೆ ತಲ್ಲೀನನಾಗಿ ಅದರಾಚೆಯ ಪರವಸ್ತುವನ್ನು ಅಲಕ್ಷಿಸಿದ್ದ ತೋಟಿಗಗೊಗ್ಗಯ್ಯ, ಕಾಯಕ ಯೋಗಿ ಸಿದ್ಧರಾಮ, ಅಧ್ಯಾತ್ಮ ಸಾಧನೆಯಲ್ಲಿ ಉನ್ನತ ಹಂತವನ್ನು ಮುಟ್ಟಿದ್ದ. ಆದರೆ ಬಹುಜನರಿಗೆ ಅಜ್ಞಾತವಾಗಿದ್ದ ಮರುಳಶಂಕರದೇವ, ಗೋರಕ್ಷ, ಅಕ್ಕಮಹಾದೇವಿ ಇತ್ಯಾದಿ ಶರಣ ಶರಣೆಯರು ಅಲ್ಲಮನೊಡನೆ ಸಂಭಾಷಿಸಿ ಆತನ ಜ್ಞಾನದ ಬೆಳಕಿನಲ್ಲಿ ತಮ್ಮ ಅರಿವಿನ ಮಾರ್ಗವನ್ನು ಕೈಗೊಂಡು ಶೂನ್ಯವನ್ನು ಸಂಪಾದಿಸಿಕೊಂಡ ವಿವರವೇ ಶೂನ್ಯ ಸಂಪಾದನೆಯಲ್ಲಿ ಪ್ರಮುಖ ಭಾಗವಾಗಿದೆ. ಶೂನ್ಯಸಂಪಾದನೆಯಲ್ಲಿ ಬರುವ ಪಾತ್ರಗಳೆಲ್ಲವೂ ಶಿವಶರಣರ ಪಾತ್ರಗಳಾಗಿವೆ. ಅಲ್ಲದೇ ಅವುಗಳನ್ನು ಅವರ ವಚನಗಳ ಮೂಲಕವೇ ಚಿತ್ರಿಸಿರುವರು. ಪಾತ್ರಗಳ ವ್ಯಕ್ತಿತ್ವ ಮೂಲವಾದ ಘಟನಾವಳಿ ಸನ್ನಿವೇಶಗಳ ಮೂಲಕ ಕಲಾಕೃತಿ ಕಥಾವಸ್ತು ರೂಪ ತಾಳುತ್ತದೆ. ಸೀಮಿತ ಪಾತ್ರ ಸಂಖ್ಯೆಯಂತೆಯೇ ಆಯ್ದ ಸನ್ನಿವೇಶಗಳ ಮೂಲಕ ಕಥೆಯ ಸಾಂದ್ರತೆ ಇನ್ನೂ ಯಶಸ್ವಿಯಾಗಿ ಫಲಿಸುತ್ತದೆ.

ಜಿಲ್ಲೆಯ ಶೂನ್ಯಸಂಪಾದನಾ ಪರಿಷ್ಕರಣಗಳಲ್ಲಿ ಚಿತ್ರಿತವಾಗಿರುವ ಮುಕ್ತಾಯಕ್ಕ, ಆಯ್ದಕ್ಕಿ ಲಕ್ಕಮ್ಮ, ಮಹಾದೇವಮ್ಮ, ಅಕ್ಕನಾಗಮ್ಮ, ಅಕ್ಕಮಹಾದೇವಿ, ನೀಲಾಂಬಿಕೆ ಮುಂತಾದ ಸ್ತ್ರೀಪಾತ್ರಗಳು ವಾಸ್ತವದ ನೆಲೆಗಟ್ಟಿನ ಮೇಲೆ ರೂಪ ತಳೆಯುತ್ತವೆ. ಆ ಎಲ್ಲ ಸ್ತ್ರೀಪಾತ್ರಗಳು ಮಾತನಾಡಬೇಕೆಂದು ಮಾತನಾಡದೇ, ಸಹಜವಾಗಿಯೇ ಮಾತನಾಡುತ್ತವೆ. ಅವರಾಡುವ ಮಾತುಗಳಿಗೆ ಆ ಕಾಲದಲ್ಲಿ ಮೌಲ್ಯವು ಸಿಗುತ್ತಿತ್ತು ಎಂಬಂತೆ ಇಲ್ಲಿ ಚಿತ್ರಿತವಾಗಿವೆ. ಆ ಎಲ್ಲ ಪಾತ್ರಗಳಿಗೂ ಬಂಧನವಿಲ್ಲದ, ಅಡ್ಡಿಯಿಲ್ಲದ ವಾತಾವರಣವು ಸೃಷ್ಟಿಯಾದ ಕಾರಣ ಅವರ ಪಾತ್ರಗಳಿಗೆ ವಿಶೇಷತೆಯು ದೊರಕಿದೆ. ದಿನನಿತ್ಯದ ಜಂಜಾಟಗಳನ್ನು, ಸಮಸ್ಯೆಗಳನ್ನು ಆಧ್ಯಾತ್ಮಿಕ ನೆಲೆಯ ಹಿನ್ನಲೆಯಲ್ಲಿ ಪರಿಹರಿಸಿಕೊಳ್ಳುವ ಪ್ರಯತ್ನ ಮಾಡಿವೆ. ಈ ಪಾತ್ರಗಳೆಲ್ಲವೂ ಸ್ತ್ರೀಗೆ ಸಹಜವಾಗಿರುವ ಭಯ, ಹಿಂಜರಿಕೆಯನ್ನು ಬಿಟ್ಟು ಮುಂದೆ ಬಂದು ಶರಣ ರೊಟ್ಟಿಗೆ ಸಮಾನವಾಗಿ ನಿಲ್ಲುವಂತೆ ಹಾಗೂ ಓದುಗರಲ್ಲಿ ಗೌರವಭಾವನೆಯೂ ಮೂಡುವಂತೆ ಚಿತ್ರಿಸುವಲ್ಲಿ ಇಲ್ಲಿಯ ಶೂನ್ಯಸಂಪಾದನಾಕಾರ ಯಶಸ್ವಿಯಾಗಿದ್ದಾನೆ. ಶರಣರ ವಚನಗಳ ಮೂಲಕ ಶರಣರ ಚರಿತ್ರೆಯನ್ನು ಚಿತ್ರಿಸಲು ಹೊರಟಿರುವ ಸಿದ್ಧವೀರಣ್ಣೊಡೆಯನು ನಡುನಡುವೆ ತನ್ನ ಮಾತುಗಳ ಮೂಲಕ, ಸಂದರ್ಭ, ಸನ್ನಿವೇಶಗಳ ಪರಿಚಯವನ್ನು ಮತ್ತು ಅವುಗಳ ಮುನ್ನಡೆಗೆ ಸಂಪರ್ಕವನ್ನು ಕಲ್ಪಿಸುವ ಕಾರ್ಯವನ್ನು ಮಾಡುವುದರಿಂದ ಆತನ ಮಾತುಗಳು ಇಲ್ಲಿ ಸಂಪರ್ಕ

ಗದ್ಯಗಳಾಗಿ ಕೆಲಸ ನಿರ್ವಹಿಸುತ್ತವೆ. ಇಲ್ಲಿ ಬಳಕೆಯಾಗಿರುವ ವಚನಗಳಲ್ಲಿ ಕಂಡು ಬರುವ ಸಾಹಿತ್ಯಕಾಂಶಗಳನ್ನು ವಿದ್ವಾಂಸರುಗಳು ಈಗಾಗಲೇ ಗುರುತಿಸುವ ಕೆಲಸ ಮಾಡಿದ್ದಾರೆ.

ರಾಚನಿಕವಾಗಿ ಗೂಳೂರು ಸಿದ್ಧವೀರಣ್ಣೊಡೆಯನನ್ನು ಬಿಟ್ಟರೆ, ಉಳಿದವರಲ್ಲಿ ಸಂಪಾದನೆ ಅಥವಾ ಉಪದೇಶದ ವಿಭಜನೆ ಇಲ್ಲ. ಈತನ ಶೂನ್ಯ ಸಂಪಾದನೆಯನ್ನು ಅತ್ಯಂತ ಪರಿಷ್ಕೃತ ವೈಜ್ಞಾನಿಕ ಸಂಪಾದನೆ ಎಂದು ಹೇಳಲಾಗಿದೆ. ಗೂಳೂರು ಸಿದ್ಧವೀರಣ್ಣೊಡೆಯರ ಆಶಯವು, ಶರಣರ ಬಾಳಿನ ಚಿತ್ರಣದ ಜೊತೆಗೆ, ಪ್ರಭುವಿನ ವ್ಯಕ್ತಿತ್ವವನ್ನು ಜನಮನಕ್ಕೆ ತಿಳಿಸುವುದು ಮತ್ತು ವೀರಶೈವ ಸಿದ್ಧಾಂತವನ್ನರುಹುವ ಒಂದು ಗ್ರಂಥ ರಚನೆಯ ಕಾರ್ಯವಾಗಿ ಸರಿಯಾದ ರೀತಿಯಲ್ಲಿ, ತಮಗೆ ತೋಚಿದ ರೀತಿಯಲ್ಲಿ ಹೇಳುವಂತಹದ್ದಾಗಿದೆ. ಒಟ್ಟಾರೆ ಕೊನೆಯ ಪರಿಷ್ಕರಣಕಾರನಾದ ಗೂಳೂರ ಸಿದ್ಧವೀರಣ್ಣೊಡೆಯನು ತನ್ನ ಕಣ್ಣ ಮುಂದೆ ಇದ್ದ ಶಿವಗಣಪ್ರಸಾದಿ, ಹಲಗೆದೇವ, ಗುಮ್ಮಳಾಪುರದ ಸಿದ್ಧಲಿಂಗರ ಶೂನ್ಯಸಂಪಾದನೆಗಳ ಒಂದೊಂದು ಸಂಪಾದನೆಯಲ್ಲಿಯೂ ಕಂಡು ಬಂದಿರುವ ಗುಣ–ದೋಷಗಳನ್ನೆಲ್ಲ ಪರಿಗಣಿಸಿರುವುದರ ಜೊತೆಗೆ ನೂತನವಾಗಿ ದೊರೆತ ಅಪಾರ ವಚನರಾಶಿಯನ್ನು ಬಳಸಿಕೊಂಡು, ಹಿಂದಿನ ಮೂವರಿಗಿಂತಲೂ ವಿಶಿಷ್ಟವಾದ ಮತ್ತು ವ್ಯವಸ್ಥಿತವಾದ ಸಂಪಾದನೆಯನ್ನು ಸಿದ್ಧಪಡಿಸಿ ಕೊಟ್ಟಿದ್ದಾನೆ. ತನಗಿಂತ ಹಿಂದಿನ ಮೂರು ಶೂನ್ಯಸಂಪಾದನೆಗಳಲ್ಲಿದ್ದಂತಹ ಅಭಾಸ–ಅತಿರೇಕಗಳನ್ನು ಸ್ವಲ್ಪಮಟ್ಟಿಗೆ ಸಡಿಲಿಸಿದ್ದಾನೆ. ನೂತನವಾದ ವಸ್ತು–ಸಂಗತಿಗಳನ್ನು ಸೇರಿಸಿದ್ದಾನೆ. ಕುಂದು ಕೊರತೆಗಳನ್ನು ಕಂಡುಕೊಂಡು, ಅವುಗಳನ್ನು ತನಗೆ ತೋಚಿದ ರೀತಿಯಲ್ಲಿ ಸರಿಪಡಿಸುವ ಕಾರ್ಯವನ್ನು ಮಾಡುವ ಮೂಲಕ, ನೂತನವಾದ ರೂಪವನ್ನು ಕೊಟ್ಟು, ಪ್ರಭುದೇವರ ಶೂನ್ಯ–ಸಂಪಾದನೆಗೊಂದು ಪರಿಪೂರ್ಣವಾದ ಸ್ವರೂಪವನ್ನು ತಂದು ಕೊಡಲು ಪ್ರಯತ್ನಿಸಿ ಯಶಸ್ವಿಯಾಗಿ, ಹಿಂದಿನ ಸಂಪಾದನೆಗಳಲ್ಲಿದ್ದ ಅದರ ಪರಿಷ್ಕರಣದ ತೆರೆ ಎಳೆದಿದ್ದಾನೆ. ಈ ಶೂನ್ಯಸಂಪಾದನೆಯು ಒಂದು ಧಾರ್ಮಿಕ ಕೃತಿಯಾದರೂ ಸಹ, ಸಿದ್ಧವೀರಣ್ಣೊಡೆಯರ ಪ್ರಜ್ಞಾಪೂರ್ವಕ ಪಾಂಡಿತ್ಯ ಪ್ರತಿಭೆಯಿಂದಾಗಿ ಕಾವ್ಯ ಮತ್ತು ಧರ್ಮ ಎರಡು ಮೇಳೈಸಿಕೊಂಡು ಕೃತಿಯಲ್ಲಿ ಒಡಮೂಡಿವೆ ಎಂದು ಹೇಳಬಹುದು. ನಾಲ್ಕನೆಯ ಹಾಗೂ ಕೊನೆಯದಾದ ಗೂಳೂರು ಸಿದ್ಧವೀರಣ್ಣೊಡೆಯರ ಪ್ರಭುದೇವರ ಶೂನ್ಯಸಂಪಾದನೆಯು ಹೆಚ್ಚು ಪ್ರಚಲಿತವಿರುವ ಹಾಗೂ ಪ್ರಸಿದ್ಧಿಯನ್ನು ಪಡೆದ ಕೃತಿಯಾಗಿದೆ.

ಇಂದಿನವರಲ್ಲಿ ಮುಖ್ಯವಾಗಿ ಶಿವಗಣಪ್ರಸಾದಿ ಮಹಾದೇವಯ್ಯನಲ್ಲಿ ತಾನು ಕಂಡುಕೊಂಡ ದೋಷಗಳನ್ನು ಆತ ತಿದ್ದಿದ್ದಾನೆ. ಪರಿಚ್ಛೇದದಲ್ಲಿ ಬರುವ ಪ್ರಸಂಗದ

ಸಾರವನ್ನು ಆರಂಭದ ಕಂದಪದ್ಯದಲ್ಲಿ ಭಟ್ಟಿ ಇಳಿಸಿ ವಚನರೂಪಿ ಸಂವಾದದಲ್ಲಿ ಅದನ್ನು ಪ್ರತಿಪಾದಿಸಿಕೊಂಡು ಹೋಗಿದ್ದಾನೆ. ಸ್ವತಂತ್ರವಾಗಿ ತನ್ನ ಕಾಯಕದಲ್ಲಿ ತೊಡಗಿದ್ದ ಸಿದ್ಧರಾಮ ಅಲ್ಲಮನೊಡನೆ ಕಲ್ಯಾಣಕ್ಕೆ ಬಂದು ಬಸವಣ್ಣನವರನ್ನು ಕಾಣುತ್ತಿರಲಿಲ್ಲ. ಅಲ್ಲಮನಿಲ್ಲದಿದ್ದರೆ ಮಹದೇವಿಯಕ್ಕನ ಅದ್ಭುತವಾದ ನಿಲುವು ಪ್ರಕಟವಾಗುತ್ತಿರಲಿಲ್ಲ. ಈ ದೃಷ್ಟಿಯಿಂದ ನೋಡಿದಾಗ ಶರಣರ ವಚನಗಳನ್ನು ಅರ್ಥವಿಸುವವನು ಅಲ್ಲಮ. ಅಲ್ಲಮ ಇನ್ನೊಬ್ಬರನ್ನು ಪರೀಕ್ಷಿಸುವಾಗ ತನ್ನನ್ನೂ ಪರೀಕ್ಷೆಗೆ ಒಡ್ಡಿಕೊಳ್ಳುತ್ತಾನೆ. ಮಾಯೆಯ ಆವರಣದಿಂದ ಬಿಡಿಸಿಕೊಂಡು ತನ್ನ ನಿಜಜೀವನದ ಹುಟ್ಟು, ಬೆಳವಣಿಗೆ ಮತ್ತು ಪರಿಣಾಮಗಳನ್ನು ಪುನಃ ಸೃಷ್ಟಿಸುತ್ತಾನೆ. 'ಶೂನ್ಯಸಂಪಾದನೆ'ಗೆ ಅಲ್ಲಮ ನಾಯಕನಾಗುವದು ಈ ದೃಷ್ಟಿಯಿಂದ ಅರ್ಥ ಪೂರ್ಣವಾಗಿದೆ. 'ಶೂನ್ಯಸಂಪಾದನೆ'ಯ ಅಲ್ಲಮ ಮಾಯೆಯ ವಶಕ್ಕೆ ಸಿಕ್ಕವನಲ್ಲ. ಅವನು ಚಾಮರಸನ ಅಲ್ಲಮನಂತೆ 'ಮಾಯಾಕೋಳಾಹಳ'. ಅವನು ಕಲ್ಯಾಣ ಕ್ಕೆ ಎರಡು ಸಾರಿ ಬಂದನೆಂದು ಈ ಶೂನ್ಯಸಂಪಾದನೆಯಲ್ಲಿ ಪ್ರಸ್ತಾಪ ಇದೆ. "ಯಾವ ಒಂದು ಮಹಾ ಉದ್ದೇಶವನ್ನಿಟ್ಟುಕೊಂಡು ಪ್ರಸಾದಿ ಮಹಾದೇವಯ್ಯನು ಶೂನ್ಯಸಂಪಾದನೆಯನ್ನು ಮೊಟ್ಟಮೊದಲು ಸಂಭಾಷಣೆಯ ರೂಪದಲ್ಲಿ ಸಂಗ್ರಹಿಸಿದನೊ ಅದು ಉಳಿದ ಶೂನ್ಯಸಂಪಾದನಾಕಾರರ ಕೈಯಲ್ಲಿ ಕ್ರಮೇಣ ವಿಕಾಸಗೊಂಡು ಸಿದ್ಧವೀರಣ್ಣೊಡೆಯರಲ್ಲಿ ಪೂರ್ಣತೆಯನ್ನು ಪಡೆದಿದೆ ಎಂದು ಹೇಳಬಹುದು."

ಇಂದು ಪ್ರಕಟವಾಗಿರುವ ನಾಲ್ಕು ಶೂನ್ಯಸಂಪಾದನೆಗಳು ಮುಖ್ಯವಾಗಿ ಎರಡು ಪರಂಪರೆಗೆ ಸೇರಿವೆ. ಶಿವಗಣಪ್ರಸಾದಿ ಮಹಾದೇವಯ್ಯ ಹಾಗೂ ಹಲಗೆದೇವರ ಶೂನ್ಯಸಂಪಾದನೆಗಳು ಹರಿಹರ ಕವಿಯ ಪರಂಪರೆಗೆ ಸೇರಿದರೆ, ಗುಮ್ಮಳಾಪುರ ಸಿದ್ಧಲಿಂಗದೇವರು ಹಾಗೂ ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯ ಸಂಪಾದನೆಗಳು ಚಾಮರಸ ಕವಿಯ ಪರಂಪರೆಗೆ ಸೇರುತ್ತವೆ. ಚಾಮರಸ ನೂರೊಂದು ವಿರಕ್ತರಲ್ಲಿ ಒಬ್ಬ. ಗುಮ್ಮಳಾಪುರ ಸಿದ್ಧಲಿಂಗದೇವರು ಹಾಗೂ ಗೂಳೂರು ಸಿದ್ಧವೀರೊಣ್ಣೊಡೆಯರು ಕೂಡಾ ಇದೇ ಪರಂಪರೆಗೆ ಸೇರಿದವರು.

ಶಿವಗಣ ಪ್ರಸಾದಿ ಮಹಾದೇವಯ್ಯನ ಕೃತಿಯ ನಂತರ ನಿರ್ಮಾಣವಾದ ತುಮಕೂರು ಪರಿಸರದ ಶೂನ್ಯಸಂಪಾದನಾ ಕೃತಿಗಳೂ ಏನಿದ್ದರೂ ಆ ಮೂಲವನ್ನೇ ಆಧರಿಸಿ ಅಲ್ಪ ಸ್ವಲ್ಪ ಬದಲಾವಣೆ ಹಾಗೂ ಕೆಲವು ಹೊಸ ಪ್ರಸಂಗಗಳು ಅಳವಡಿಸಲ್ಪಟ್ಟ ಪರಿಷ್ಕರಣಗಳಾಗಿವೆ. ಮಹಾದೇವಯ್ಯನ ಮೂಲಕೃತಿ ನಂತರ ಶೂನ್ಯ ಸಂಪಾದನಾ ಸಂಕಲನಕಾರರಿಂದ ಪರಿಷ್ಕರಣಗೊಳ್ಳಲು ಬಹುಮುಖ್ಯ ಕಾರಣ ಸಿದ್ದರಾಮಯ್ಯ ದೀಕ್ಷಾ ಪ್ರಸಂಗ. ಇದರ ಜೊತೆಗೆ ಅಲ್ಲಮ ಕಾಮಲತೆಯರ ಪ್ರಸಂಗ, ಅಕ್ಕ ಕೌಶಿಕರ

ಸಂಬಂಧ, ಕಿನ್ನರಯ್ಯನ ಪ್ರಸಂಗ, ಕಾಲ ಕಾಲಕ್ಕೆ ಸಂಕಲನಗೊಂಡ ನಂತರದ ಶೂನ್ಯ ಸಂಪಾದನೆಗಳಲ್ಲಿ ಕೆಲವು ಸನ್ನಿವೇಶಗಳು ಹೊಸದಾಗಿ ಸೇರ್ಪಡೆಯಾಗಿದೆ. ಹಲಗೆಯಾರ್ಯನ ಶೂನ್ಯ ಸಂಪಾದನೆಯಲ್ಲಿ ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮನ ಪ್ರಸಂಗ ಸೇರ್ಪಡೆಯಾಗಿರುವುದರ ಜೊತೆಗೆ ಗೋರಕ್ಷನ ಪ್ರಸಂಗ ಮೊದಲ ಬಾರಿಗೆ ಪ್ರತ್ಯೇಕ ಸ್ಥಾನ ಪಡೆದಿದೆ. ಗೂಳೂರು ಸಿದ್ಧವೀರಣ್ಣೊಡೆಯನ ಶೂನ್ಯ ಸಂಪಾದನೆಯಲ್ಲಿ ಮೋಳಿಗೆ ಮಾರಯ್ಯನ ಪ್ರಸಂಗ ಮತ್ತು ಘಟ್ಟಿವಾಳಯ್ಯನ ಪ್ರಸಂಗ ಸೇರ್ಪಡೆಯಾಗಿದೆ. ಶಿವಗಣ ಪ್ರಸಾದಿ ಮಹಾದೇವಯ್ಯನು ಮೊದಲು ರೂಪಿಸಿದ ಶೂನ್ಯಸಂಪಾದನೆಯ ತಳಹದಿ ಹಾಗೂ ಆ ಚೌಕಟ್ಟಿನಲ್ಲಿಯೇ ನಂತರದ ನಾಲ್ಕು ಶೂನ್ಯ ಸಂಪಾದನೆಗಳ ಪರಿಷ್ಕರಣೆ ಹಾಗೂ ಕೆಲವು ನೂತನ ವಚನಗಳು ಸಂದರ್ಭಕ್ಕನುಸಾರವಾಗಿ ಸೇರಲ್ಪಟ್ಟಿವೆ. ಹಲಗೆಯಾರ್ಯರ ಶೂನ್ಯ ಸಂಪಾದನೆಯಲ್ಲಿ ಹೆಚ್ಚಿನ ಅಂದರೆ ಶರಣರ ಸುಮಾರು 1599 ವಚನಗಳು ಕಂಡು ಬರುತ್ತವೆ. ಶರಣರ ವಚನಗಳಿಂದ ಅನುಭವಮಂಟಪದಲ್ಲಿ ಗೋಷ್ಠಿಗಳು ನಡೆದವು ಎಂಬಂತೆ ಕಟ್ಟಿಕೊಟ್ಟಿದ್ದಾರೆ. ಶರಣರ ಆಲೋಚನಾ ಅನುಭವಗಳು ಅಭಿವ್ಯಕ್ತಿಯ ಜೊತೆಗೆ ತನ್ನ ವಿಚಾರಗಳಿಗೂ ಇವರು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ವಚನಕಾರರ ವೀರಶೈವ ಧರ್ಮದ ತಾತ್ವಿಕ ಸಿದ್ಧಾಂತ, ಆಚರಣೆಗಳ ಪರಮೋದ್ದೇಶ ಆದ ರ್ಶಗಳ ಪರಿಚಯವನ್ನು ಅಭ್ಯಾಸಿಗಳಿಗೆ ಮಾಡಿಕೊಡುವಲ್ಲಿ ತುಮಕೂರು ಜಿಲ್ಲೆಯ ಈ ಶೂನ್ಯಸಂಪಾದನಾ ಪರಿಷ್ಕರಣಗಳು ಯಶಸ್ವಿಯಾಗಿವೆ.

ಬಹುಮಟ್ಟಿಗೆ ತುಮಕೂರು ಪರಿಸರದ ಈ ಶೂನ್ಯ ಸಂಪಾದನೆಗಳಲ್ಲಿ ಮುಖ್ಯವಾಗಿ, ನಿಲುವಿಗೇರಿರುವ, ನಿಲುವಿನಲ್ಲಿಯೇ ಸದಾ ಸಂಚರಿಸಬಲ್ಲ ಮಹಾ ಅನುಭಾವಿ ಅಲ್ಲಮಪ್ರಭುವೇ ಶೂನ್ಯಸಂಪಾದನೆಯ ಕೇಂದ್ರ ಶಕ್ತಿಯಾದುದರಿಂದ ಇತರ ಶರಣರು ಆ ಮಟ್ಟಕ್ಕೇರಲು ಆತ ಮಾರ್ಗದರ್ಶಕನಾಗಿರುವುದನ್ನು ಕಾಣುತ್ತೇವೆ. ಸಾಧನೆಯ ಆ ನಿಲುವಿನಲ್ಲಿಯೇ ನಿಂತು ಜೀವನ ಮಹತ್ತರವಾದ ಬೆಲೆಯನ್ನು ಹೆಜ್ಜೆ ಹೆಜ್ಜೆಗೂ ಎತ್ತಿ ತೋರಿಸಿರುವುದನ್ನು ಇಲ್ಲಿ ಪ್ರಮುಖವಾಗಿ ಗುರುತಿಸಬಹುದಾಗಿದೆ. ಅಲ್ಲಮನು ಮಾನವ ಜನಾಂಗದಲ್ಲಿ ಉಳಿದು ಕೊಂಡು ಬರಬಹುದಾದ ಶಾಶ್ವತ ಜೀವನ ಮೌಲ್ಯಗಳನ್ನು ಇಲ್ಲಿ ಪ್ರತಿಪಾದಿಸಿದ್ದಾನೆ ಅಂತವುಗಳನ್ನು ಸಾಮಾನ್ಯ ಜನತೆಯ ಮುಂದಿಟ್ಟು ಅವರ ಬದುಕನ್ನು ಹಸನುಗೊಳಿಸುವುದೆ ಇವರ ಮುಖ್ಯ ಉದ್ದೇಶವಾಗಿದೆ. ಮಾನವನಿಗೆ ಪ್ರಧಾನವಾಗಿ ಬೇಕಾಗಿರುವ ತಿಳುವಳಿಕೆ, ಜ್ಞಾನ, ಮಾರ್ಗದರ್ಶನಗಳೆಲ್ಲಾ ಇಲ್ಲಿ ಅಡಕವಾಗಿವೆ. ಜನರಲ್ಲಿ ತುಂಬಿಕೊಂಡಿರುವ ಅಜ್ಞಾನ, ಮೂಢನಂಬಿಕೆ, ಜಾತಿತಾರತಮ್ಯ, ಲಿಂಗತಾರತಮ್ಯ, ಹಿಂಸೆ, ಕ್ರೌರ್ಯ, ಅಸೂಯೆ, ಧೂರ್ತತೆ, ಕುತಂತ್ರ ತುಂಬಿ ತುಳುಕಿರುವುದರಿಂದ ಅದನ್ನು ಹೊಗಲಾಡಿಸಬೇಕು

ಇದರಿಂದ ಹೊರಬರಲು ಅಲ್ಲಮಪ್ರಭು ಮತ್ತು ಇತರ ವಚನಕಾರರು ತೋರಿಸಿದ ದಾರಿಯಲ್ಲಿ ಮುನ್ನಡೆಯಬೇಕು. ಹೀಗೆ ವಚನಕಾರರ ತತ್ವಾದರ್ಶಗಳನ್ನು ಇಲ್ಲಿ ಅಚ್ಚುಕಟ್ಟಾಗಿ ತಿಳಿಯ ಪಡಿಸಿದ್ದಾರೆ.

ಶರಣರ ಸಂಘಟನೆಯಿಂದ ಕಲ್ಯಾಣದಲ್ಲಿ ನಡೆದ ಸಾಮಾಜಿಕ–ಧಾರ್ಮಿಕ–ಸಾಹಿತ್ಯಕ ಚಟುವಟಿಕೆಗಳು ಕಾಣದ ಕೈವಾಡದಿಂದಾಗಿ ಅಂತ್ಯ ಕಂಡುಕೊಂಡ ಅಸಹನೀಯ ನೋವಿನ ಎಳೆ ಅವರ ಮನಸ್ಸಿನಮೇಲೆ ಪರಿಣಾಮ ಬೀರಿದಂತಿದೆ. ವಾಸ್ತವವಾಗಿ ಏನು ನಡೆಯಿತೆಂಬುದು ಅವರಿಗೂ ನಿಚ್ಚಳವಾಗಿ ತಿಳಿಯದು. ಆದರೆ, ಬಸವಪುರಾಣದಂತಹ ಕೃತಿ ಕಟ್ಟಿಕೊಟ್ಟ ಆ ದುರಂತ ಕಥೆಯು ಸತ್ಯವೆಂದು ನಂಬುವಂತಹ ಮಟ್ಟಕ್ಕೆ ಅವರನ್ನು ಕರೆದೊಯ್ದಿದೆ. ತೆಲುಗಿನ ಪಾಲ್ಕುರಿಕೆ ಸೋಮನಾಥನು (ಸು. 1250) ಹೇಳಿದ ಆ ದಾರುಣಕಥೆಯನ್ನು ಕನ್ನಡದ ಭೀಮಕವಿ (1369) ಮುಂದುವರಿಸಿದನು. ಅದನ್ನು ನಂಬಿದ ಧರ್ಮಶ್ರದ್ಧೆಯ ಮನಸ್ಸು ಹೃದಯ ಕಲಕುವ ದುರಂತ ಸನ್ನಿವೇಶವನ್ನು ವಾಸ್ತವವಾಗಿ ನಡೆದುದೆನ್ನುವಂತೆ ಚಿತ್ರಿಸಲು ಪ್ರಚೋದನೆ ನೀಡಿದೆ. ಶೂನ್ಯಸಂಪಾದನೆಯ ಧಾರ್ಮಿಕ ಪರಿಸರದಲ್ಲಿ ಈ ದುರಂತದ ಕರಿಯ ನೆರಳು ತನ್ನ ಕುಡಿ ಚಾಚಿ ವಾಸ್ತವ–ಭ್ರಮೆಗಳ ನಡುವೆ ತುಯ್ದಾಡುವಂತೆ ಮಾಡಿಬಿಟ್ಟಿದೆ. ಶಿವಗಣ ಪ್ರಸಾದಿ ಮಹಾದೇವಯ್ಯ ಹಾಗೂ ಹಲಗೆಯಾರ್ಯರಲ್ಲಿ ಇಲ್ಲದ ಬಿಜ್ಜಳ ಕೊಲೆಗೆ ಬಸವಣ್ಣ ಸೂಚನೆ ಕೊಟ್ಟನೆಂಬ ಸಂಗತಿಯನ್ನು ನಂತರದ ಈ ಎರಡು ಶೂನ್ಯಸಂಪಾನೆಗಳು ಕಲ್ಪಿಸಿಕೊಂಡಿವೆ. ಆ ಬಸವರಾಜದೇವರು ಶಿವಭಕ್ತಿ ದ್ರೋಹಿ ಬಿಜ್ಜಳನ ಸಂಹರಿಸಿ ನನ್ನಿಯಂ ಮರೆ ಎಂದು ಜಗದೇವನಿಗೆ ಬೆಸನಿತ್ತು (ಗೂಳೂರು ಸಿದ್ಧವೀರಣ್ಣೊಡೆಯನ ಶೂನ್ಯ ಸಂಪಾದನೆ) ಎಂಬ ಮತ್ತು ಬಸವರಾಜನು 'ಶರಣ ಸಂಕುಳವೆರಸಿ ಜಗದೇವಯ್ಯಗಳೇ ಆ ಸದ್ಭಕ್ತನಳಿದ ದ್ರೋಹಿಯನಪಹರಿಸಿ ನನ್ನಿಯಂ ಮೆರೆ' (ಗುಮ್ಮಳಾಪುರದ ಸಿದ್ಧಲಿಂಗಯತಿಯ ಶೂನ್ಯ ಸಂಪಾದನೆ) ಎನುತ 'ಜಗದೇವರಿಗೆ ಬೆಸನಿತ್ತು–ಲೋಕಪಾಲಕನ ನೊಸಲ ಬರಹವನೊರಸಲೊಡನೆ ಇತ್ತಲು ಕೂಡಲಸಂಗಮದೇವರು ತಮ್ಮ ಕವಳಿಗೆ ತೊಡೆದಾರೆಂದು ಬಸವೇಶ್ವರನು ಶರಣ ಜನಂಗಳೊಡನೆ ನಿರೂಪಿಸುತ್ತ ಇಲ್ಲಿ ಇವರವರೆನ್ನದೆ ನೀವೆಲ್ಲಾ ಕೇಳಿ ಈ ಕ್ಷಣದೊಳ್ ರಾಜರ ಸಾಮ್ರಾಜ್ಯವುಂ ಕಲ್ಯಾಣಪಟ್ಟಣವೆಲ್ಲವುಂ ಹಾಳಹುದೆಂದು ದಿಟವನಸೊಲ್ಲಿಸಿದನೆಂದು ಸಕಲ ಗಣಂಗಳಿಗೆ ಬಿನ್ನೈಸುವ ವಚನ...' (–495) ಎನ್ನುವಲ್ಲಿ ಈ ಸೂಚನೆಯನ್ನು ಕಾಣುತ್ತೇವೆ. ಈ ಧರ್ಮಪರವಾದ ಕೊನೆಯ ಇಬ್ಬರು ಶೂನ್ಯಸಂಪಾದನಕಾರರ ನಿಲವು ಬಸವಣ್ಣನ ಕಳಂಕರಹಿತ ಶುಭ್ರ ಸ್ಫಟಿಕ ವ್ಯಕ್ತಿತ್ವಕ್ಕೆ ಮಸಿಬಳಿಯುವ ಪ್ರಯತ್ನವೆಂದು ಅವರು ಯೋಚಿಸಲೇ ಇಲ್ಲ. ಇದೊಂದು ಸಣ್ಣ ಕೊರತೆ ಈ ಎರಡು ಶೂನ್ಯಸಂಪಾದನೆಗಳಲ್ಲಿ ಎದ್ದು ಕಾಣುತ್ತದೆ.

ಜಿಲ್ಲೆಯ ಶೂನ್ಯಸಂಪಾದನೆಯ ಸಂಕಲನದ ಕೃತಿಗಳಿಗೆ ಕನ್ನಡದಲ್ಲಿ ತನ್ನದೇ ಆದ ಒಂದು ಸ್ಥಾನವಿದೆ. ಪ್ರಸ್ತುತ ಸವಾಲುಗಳಿಗೆ ಶೂನ್ಯಸಂಪಾದನೆಗಳಲ್ಲಿ ಉತ್ತರಗಳಿಲ್ಲದಿದ್ದರೂ, ಇವುಗಳ ರಚನೆಗೊಂಡ ಸಂದರ್ಭದಲ್ಲಿ ಇಂತಹ ಕೃತಿಗಳ ಅನಿವಾರ್ಯತೆ ಎದ್ದು ಕಾಣಿಸುತ್ತದೆ. ಹನ್ನೆರಡನೇ ಶತಮಾನದ ವಚನಕಾರರ ಸಾಮಾಜಿಕ ಆರ್ಥಿಕ ಚಿಂತನೆಗಳಿಗಿಂತ, ಶೂನ್ಯ ಸಂಪಾದನಾಕಾರರಿಗೆ ಧಾರ್ಮಿಕ ವಿಷಯವೇ ಮುಖ್ಯವಾಯಿತು. ಹೀಗಾಗಿ ಶರಣ ಧರ್ಮದ ಆಚರಣೆಗಳನ್ನು ಉಳಿಸಿಕೊಳ್ಳುವುದು ಅಂದು ಅವರಿಗೆ ಅನಿವಾರ್ಯವಾಗಿತ್ತು. ಜಿಲ್ಲೆಯ ಶೂನ್ಯ ಸಂಪಾದನಾಕಾರರು ತಮ್ಮ ಪರಿಷ್ಕರಣೆಯಲ್ಲಿ ಸಂಯೋಜಿಸಿದ, ಸಿದ್ಧರಾಮನ ಲಿಂಗ ದೀಕ್ಷಾ ಪ್ರಸಂಗ, ನುಲಿಯ ಚಂದಯ್ಯಗಳ ಪ್ರಸಂಗ, ಘಟ್ಟಿವಾಳಯ್ಯಗಳ ಪ್ರಸಂಗ ಈ ಎಲ್ಲಾ ಸಂಪಾದನೆಗಳಲ್ಲಿ ಇಷ್ಟಲಿಂಗದ ಪ್ರಾಮುಖ್ಯತೆಯ ಪ್ರತಿಪಾದನೆಗೆ ಮತ್ತು ಧಾರ್ಮಿಕ ಪಥ್ಯಕ್ಕೆ ಹೆಚ್ಚು ಮಹತ್ವ ಕೊಟ್ಟಿದ್ದಾರೆ. ಚಾಮರಸನ ಪ್ರಭುಲಿಂಗಲೀಲೆ ಅಲ್ಲಮನ ವಾಸ್ತವ ಬದುಕಿನಿಂದ ದೂರ ಸರಿಯಿತು. ಹರಿಹರನ ಕಾಮಲತೆ ಇಲ್ಲಿ ಮಾಯೆಯಾದಳು. ಹೆಣ್ಣು ಮಾಯೆಯಲ್ಲವೆಂದು ಹೇಳಿದ ಅಲ್ಲಮನೇ ಇಲ್ಲಿ ಹೆಣ್ಣನ್ನು ಮಾಯೆಯೆಂದು ಭಾವಿಸಿದ. ಮಾಯೆಯನ್ನು ಸೋಲಿಸಿ ಮಾಯಾಕೋಲಾಹಲನಾದ. ಹನ್ನೆರಡನೇ ಶತಮಾನದ ಶಿವಶರಣರ ಪ್ರಗತಿಪರ ವಿಚಾರಗಳೆಲ್ಲಾ ಶೂನ್ಯ ಸಂಪಾದನಾಕಾರರ ಕಾಲಕ್ಕೆ ಮೂಲೆಗುಂಪಾದವು. ಹೀಗಾಗಿ ಇದು ವೀರಶೈವ ಧರ್ಮದ ಪುನರುತ್ಥಾನವೇ ಹೊರತು, ವಚನ ಚಳವಳಿಯ ಪುನರುತ್ಥಾನವಲ್ಲ. ಇವರೆಲ್ಲಾ ವೀರಶೈವದ ಧಾರ್ಮಿಕ ಪಥ್ಯವನ್ನು ಪ್ರಚಾರ ಪಡಿಸಿದರೇ ಹೊರತು ಅದರ ಸಾಂಸ್ಕೃತಿಕ ಪಥ್ಯವನ್ನಲ್ಲ ಎಂಬ ನಿಲುವು ಕೆಲವು ಪ್ರಗತಿ ಪರರ ನಿಲುವಾಗಿದೆ.

ಆದಾಗ್ಯೂ ಶೂನ್ಯಸಂಪಾದನೆಯಲ್ಲಿ ಭಕ್ತಿಯನ್ನು ಒಂದು ಸಾಮಾಜಿಕ ಮೌಲ್ಯವಾಗಿ ನೋಡಲು ಪ್ರಯತ್ನಿಸಲಾಗಿದೆ. ಶೂನ್ಯಸಂಪಾದನೆಯು ಸಾಮಾಜಿ–ಕ ಮೌಲ್ಯಗಳನ್ನು ಸೂಕ್ಷ್ಮವಾಗಿ ಪ್ರತಿಪಾದಿಸುವ ಕೆಲಸವನ್ನು ಮಾಡಿದೆ. ಇಲ್ಲಿ ಸೃಷ್ಟಿಸಿರುವ ಸನ್ನಿವೇಶಗಳ ಮೂಲಕ ಮೌಲ್ಯಗಳನ್ನು ಪ್ರತಿಪಾದಿಸಲಾಗಿದೆ. ಆಯ್ದಕ್ಕಿ ಮಾರಯ್ಯನ ಸಂಪಾದನೆಯಲ್ಲಿ ಕಾಯಕದ ಸ್ವರೂಪ, ದುಡಿಮೆಗೆ ತಕ್ಕಷ್ಟೇ ಪ್ರತಿಫಲವನ್ನು ಪಡೆಯುವುದು, ಇತ್ಯಾದಿ ಅಂಶಗಳ ಪ್ರತಿಪಾದನೆಯನ್ನು ಕಾಣಬಹುದಾಗಿದೆ. ನುಲಿಯ ಚಂದಯ್ಯನ ಸಂಪಾದನೆಯಲ್ಲಿ ಕಾಯಕ ನಿಷ್ಠೆಯನ್ನು ಕಾಣುತ್ತೇವೆ. ಲಿಂಗದ ಕೈಯಲ್ಲಿ ಹಗ್ಗವನ್ನು ಮಾಡಿಸಿ ಅದರ ಕೈಯಲ್ಲಿಯೇ ಮಾರಿಸಿದ ಪ್ರಸಂಗವು ಅರ್ಥವತ್ತಾಗಿ ಮೂಡಿಬಂದಿದೆ. ಇನ್ನೂ ಮುಕ್ತಾಯಕ್ಕ, ಆಯ್ದಕ್ಕಿ ಲಕ್ಕಮ್ಮ, ಮೋಳಿಗೆ ಮಹಾದೇವಮ್ಮ, ಅಕ್ಕಮಹಾದೇವಿ, ನೀಲಲೋಚನೆಯರ

ಜೀವನ ಪ್ರಸಂಗಗಳಲ್ಲಿ ಸ್ತ್ರೀಸ್ವಾತಂತ್ರ್ಯ ಹಾಗೂ ಸಮಾನತೆಯ ಪ್ರತಿಪಾದನೆಯಿದೆ. ಶೂನ್ಯಸಂಪಾದನೆಯಲ್ಲಿ ಚಿತ್ರಿತವಾಗಿರುವ ಸನ್ನಿವೇಶಗಳ ಮೂಲಕ ಮಾನವೀಯ ಅನುಕಂಪ, ಸರ್ವಸಮಾನತೆ, ಶ್ರಮದ ದುಡಿಮೆ, ಸಂಪತ್ತಿನ ಸದ್ವಿನಿಯೋಗ, ಸ್ತ್ರೀಸ್ವಾತಂತ್ರ್ಯ, ದಾಸೋಹ, ಕಾಯಕ, ಭಕ್ತಿ ಈ ಮೊದಲಾದ ಸಾಮಾಜಿಕ ಮೌಲ್ಯಗಳನ್ನು ಸೂಕ್ಷ್ಮವಾಗಿ ಜಿಲ್ಲೆಯ ಶೂನ್ಯಸಂಪಾದನಾಕಾರರು ಪ್ರತಿಪಾದಿಸಿದ್ದಾರೆ. ಜಿಲ್ಲೆಯ ಶೂನ್ಯಸಂಪಾದನೆಗಳು ಕೂಡ ತಮ್ಮ ಚಾರಿತ್ರಿಕ ಸಂದರ್ಭದಲ್ಲಿ ಪ್ರಶ್ನೆಗಳನ್ನು ಕೇಳಿಕೊಂಡು ತಮ್ಮ ವರ್ತಮಾನದ ಆಶೋತ್ತರಗಳಿಗೆ ಸ್ಪಂದಿಸಿರುವ ಕೃತಿಗಳಾಗಿವೆ. ವಚನಕಾರರಿಗೆ ಪ್ರತಿಕ್ರಿಯೆಯಾಗಿ ಮೂಡಿದ ಶೂನ್ಯಸಂಪಾದನೆಗೆ ಪ್ರತಿಕ್ರಿಯೆಯಾಗಿ, ಭಿನ್ನಾಭಿಪ್ರಾಯವಾಗಿ ಮತ್ತು ತಿದ್ದುಪಡಿಯಾಗಿ ಈ ನಾಲ್ಕು ಶೂನ್ಯಸಂಪಾದನೆಗಳು ಒಡಮೂಡಿವೆ. ನಾಲ್ಕು ಶೂನ್ಯ ಸಂಪಾದನೆಗಳ ಸ್ವರೂಪವೇನೇ ಇರಲಿ, ಇವು ಭಿನ್ನಾಭಿಪ್ರಾಯವನ್ನು ಹೊಟ್ಟೆಯಲ್ಲಿಟ್ಟುಕೊಂಡು ಚರ್ಚೆ ಬೆಳೆಸುವ ಪ್ರಜಾಸತ್ತಾತ್ಮಕಗುಣದ ಭಾಗವಾಗಿ ಬಂದವುಗಳು ಎಂಬುದು ಇಲ್ಲಿ ಗಮನಿಸ ಬೇಕಾದ ಸಂಗತಿಯಾಗಿದೆ. ಶೂನ್ಯಸಂಪಾದನೆಯ ಈ ಸರಣಿ ಪ್ರತಿಕ್ರಿಯೆಗಳು ಕನ್ನಡ ಸಾಹಿತ್ಯ ಸಂಸ್ಕೃತಿಯಲ್ಲಿ ಬಹುದೊಡ್ಡ ವಿದ್ಯಮಾನವಾಗಿರುವುದನ್ನು ವಿದ್ವಾಂಸರೂ ಗುರುತಿಸಿದ್ದಾರೆ. ಇಂತಹ ಸಾಂಸ್ಕೃತಿಕ ಪಠ್ಯಗಳಾದ ಶೂನ್ಯಸಂಪಾದನೆಗಳ ಸೃಷ್ಟಿಯಲ್ಲಿ ತುಮಕೂರು ಜಿಲ್ಲೆಯ ಕೊಡುಗೆ ಗಮನಾರ್ಹವಾದುದಾಗಿದೆ. ಇಂದು ಶೂನ್ಯಸಂಪಾದನೆಗಳನ್ನು ಗುರುತಿಸುವಾಗ ಅವುಗಳನ್ನು ತುಮಕೂರು ಜಿಲ್ಲೆಯ ಶೂನ್ಯಸಂಪಾದನೆಗಳು ಎಂದೇ ನಾವುಗಳು ಪರಿಗಣಿಸಬೇಕಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಭೂಸನೂರಮಠ ಸಂ. ಶಿ. (ಸಂ). ಗೂಳೂರು ಸಿದ್ಧವೀರಣ್ಣೊಡೆಯ ಶೂನ್ಯಸಂಪಾದನೆ. ಮಠಾಧಿಪತಿಗಳು ಸಿದ್ದಲಿಂಗೇಶ್ವರ ಸಂಸ್ಥಾನಮಠ, ರಾವೂರ. ನಾಲ್ಕನೇ ಮುದ್ರಣ 1999.
2. ಕಲಬುರ್ಗಿ ಎಂ. ಎಂ. & ವೀರಣ್ಣ ರಾಜೂರ (ಸಂ), ಗೂಳೂರು ಸಿದ್ಧವೀರಣ್ಣೊಡೆಯರು ರಚಿಸಿದ ಪ್ರಭುದೇವರ ಶೂನ್ಯ ಸಂಪಾದನೆ. ಲಿಂಗಾಯತ ಅಧ್ಯಯನ ಸಂಸ್ಥೆ, ಡಂಬಳ–ಗದಗ. 2016.
3. ರವೀಂದ್ರನಾಥ ಕೆ. ಮತ್ತು ಪ್ರಕಾಶ ಗಿರಿಮಲ್ಲನವರ್ (ಸಂ). ಗುಮ್ಮಳಾಪುರದ ಸಿದ್ಧಲಿಂಗಯತಿಗಳ ಶೂನ್ಯಸಂಪಾದನೆ. ಜನಕಲ್ಯಾಣ ಸಂಸ್ಥೆ, ಸೊಂಡೂರು. 2021.
4. ವಿದ್ಯಾಶಂಕರ ಎಸ್. ಮತ್ತು ಸಿದ್ಧಲಿಂಗಯ್ಯ ಜಿ. ಎಸ್. (ಸಂ). ಹಲಗೆಯಾರ್ಯನ ಶೂನ್ಯ ಸಂಪಾದನೆ. ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು. 1998.
5. ತಿಪ್ಪೇರುದ್ರಸ್ವಾಮಿ ಹೆಚ್. ಶರಣರ ಅನುಭಾವ ಸಾಹಿತ್ಯ. ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು. ನಾಲ್ಕನೇ ಮುದ್ರಣ 1994.
6. ಚಿದಾನಂದಮೂರ್ತಿ ಎಂ. ಶೂನ್ಯಸಂಪಾದನೆಯನ್ನು ಕುರಿತು. ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು. 1988.
7. ಕಲಬುರ್ಗಿ ಎಂ. ಎಂ. ಮಾರ್ಗ–1. ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು. 1995.
8. ವಿದ್ಯಾಶಂಕರ ಎಸ್. ವೀರಶೈವ ಸಾಹಿತ್ಯ ಚರಿತ್ರೆ: ಸಂಪುಟ–3, ಭಾಗ 1. ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು. 2014.
9. ಶಿವಣ್ಣ ಎಸ್. ಬಿಡುಮುತ್ತು. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು. 2004.
10. ನಾಗಭೂಷಣ ಸಿ. ಶರಣ ಸಾಹಿತ್ಯ ದೀಪಿಕೆ. ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಕಲಬುರಗಿ. 2017.
11. ನಾಗಭೂಷಣ ಸಿ. ಕನ್ನಡ ಸಾಹಿತ್ಯ–ಸಂಸ್ಕೃತಿ ಬಾಗಿನ. ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು. 2020.
12. ಬಸವರಾಜ ಸಬರದ (ಸಂ). ಶೂನ್ಯ ಸಂಪಾದನೆ. ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ. 2011.